ಕರ್ನಾಟಕ ವಿಧಾನ ಪರಿಷತ್ತು

# ನೂರ ಐವತ್ತನೆಯ ಅಧಿವೇಶನ

# ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

(ದಿನಾಂಕ: 03.07.2023 ರಿಂದ
21.07.2023ರವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

# ನೂರ ಐವತ್ತನೆಯ ಅಧಿವೇಶನ

# ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

(ದಿನಾಂಕ: 03.07.2023 ರಿಂದ
21.07.2023ರವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ – 1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಸೋಮವಾರ, ದಿನಾಂಕ:03.07.2023**

**(01)**

ದಿನಾಂಕ:03.07.2023 ರಂದು ಮಧ್ಯಾಹ್ನ 1.00 ಗಂಟೆಗೆ ಸದನವು ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

'ವಂದೇ ಮಾತರಂ' ಗೀತೆಯೊಂದಿಗೆ ಗೌರವ ಸೂಚಿಸುವ ಮೂಲಕ ಸದನದ ಕಾರ್ಯಕಲಾಪಗಳು ವಿಧ್ಯುಕ್ತವಾಗಿ ಆರಂಭಗೊಂಡಿತು.

## 1. ಪ್ರಕಟಣೆ

1. ಸನ್ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:03.07.2023ರ ತಮ್ಮ ಪತ್ರದಲ್ಲಿ ತಿಳಿಸಿರುವ ರೀತ್ಯಾ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 2(1)ರ ಪ್ರಕಾರ ಶ್ರೀ ಎನ್.ಎಸ್. ಬೋಸ್‌ರಾಜು ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ದಿನಾಂಕ:03.07.2023 ರಿಂದ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡಿರುತ್ತಾರೆಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

2. ಸನ್ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:03.07.2023ರ ತಮ್ಮ ಪತ್ರದಲ್ಲಿ ತಿಳಿಸಿರುವ ರೀತ್ಯಾ, ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರಾದ ಶ್ರೀ ಸಲೀಂ ಅಹಮದ್ ಅವರನ್ನು ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರನ್ನಾಗಿ ದಿನಾಂಕ:03.07.2023ರಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

3. ದಿನಾಂಕ:15.06.2023ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಅಧಿವೇಶನದ ಪ್ರಾರಂಭದಲ್ಲಿ ಎಲ್ಲಾ ಮಾನ್ಯ ಶಾಸಕರು ಸಂವಿಧಾನದ ಪೀಠಿಕೆಯನ್ನು ಓದಬೇಕೆಂದು ನಿರ್ಣಯಿಸಲಾಗಿರುತ್ತದೆ. ಅದರಂತೆ ಪ್ರಸಕ್ತ ಅಧಿವೇಶನದಿಂದ ಅಧಿವೇಶನದ ಪ್ರಾರಂಭದ ದಿನ ಎಲ್ಲಾ ಮಾನ್ಯ ಶಾಸಕರುಗಳು ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಬೇಕೆಂದು ಮಾನ್ಯ ಶಾಸಕರುಗಳ ಗಮನಕ್ಕೆ ತರುವ ಮೂಲಕ ಮಾನ್ಯ ಸಭಾಪತಿಯವರು ಎಲ್ಲಾ ಮಾನ್ಯ ಶಾಸಕರಿಗೂ ಸಂವಿಧಾನದ ಪೀಠಿಕೆಯನ್ನು ಭೋದಿಸಿದರು.

**ಭಾರತದ ಸಂವಿಧಾನ**

**ಪೀಠಿಕೆ**

**ಭಾರತದ ಜನಗಳಾದ ನಾವು, ಭಾರತವನ್ನು ಸಾರ್ವಭೌಮ, ಸಮಜವಾದಿ, ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ರೂಪಿಸುವುದಕ್ಕಾಗಿ; ಭಾರತದ ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯವನ್ನು**; ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನೆಯ **ಸ್ವಾತಂತ್ರ್ಯವನ್ನು**; ಸ್ಥಾನಮಾನ ಮತ್ತು ಅವಕಾಶಗಳ **ಸಮಾನತೆಯನ್ನು** ದೊರೆಯುವಂತೆ ಮಾಡುವುದಕ್ಕಾಗಿ; ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ **ಭ್ರಾತೃತ್ವ ಭಾವನೆಯನ್ನು** ಮೂಡಿಸುವುದಕ್ಕೆ ದೃಢಸಂಕಲ್ಪ ಮಾಡಿ, ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೇ ದಿನದಂದು **ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು, ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.**

**2. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸದನದ ಮುಂದೆ ಮಂಡಿಸಿದರು.**

**3. ಸಂತಾಪ ಸೂಚನೆಗಳು**

ಕಳೆದ ಅಧಿವೇಶನದಿಂದೀಚೆಗೆ ನಿಧನ ಹೊಂದಿದ ಈ ಕೆಳಕಂಡ ಗಣ್ಯರುಗಳ ನಿಧನದ ಬಗ್ಗೆ ಮಾನ್ಯ ಸಭಾಪತಿಯವರು ಸಂತಾಪ ಸೂಚನಾ ನಿರ್ಣಯವನ್ನು ಸದನದಲ್ಲಿ ಮಂಡಿಸಿದರು.

01. ಶ್ರೀಮತಿ ರತ್ನಾ ವಿ. ಕುಶನೂರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು
02. ಶ್ರೀ ಅಂಜನಮೂರ್ತಿ, ವಿಧಾನ ಸಭೆಯ ಮಾಜಿ ಸದಸ್ಯರು, ಮಾಜಿ ಉಪ ಸಭಾಧ್ಯಕ್ಷರು ಹಾಗೂ ಮಾಜಿ ಸಚಿವರು
03. ಶ್ರೀ ಡಿ.ಬಿ. ಇನಾಮದಾರ, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರು
04. ಶ್ರೀ ಆರ್. ಧ್ರುವನಾರಾಯಣ, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಲೋಕಸಭೆಯ ಮಾಜಿ ಸದಸ್ಯರು
05. ಪ್ರೊ. ಮಲೆಯೂರು ಗುರುಸ್ವಾಮಿ, ಹಿರಿಯ ಸಾಹಿತಿ, ವಾಗ್ಮಿ, ಕಾದಂಬರಿಕಾರ ಸಂಪಾದಕರು ಹಾಗೂ ವಿಮರ್ಶಕರು
06. ಶ್ರೀ ನಾಡೋಜ ಬೆಳಗಲ್ಲು ವೀರಣ್ಣ, ಅಂತರಾಷ್ಟ್ರೀಯ ಖ್ಯಾತಿಯ ತೊಗಲು ಗೊಂಬೆಯಾಟದ ಕಲಾವಿದ
07. ಶ್ರೀ ಶ್ರೀನಿವಾಸ ವೈದ್ಯ, ಹಿರಿಯ ಸಾಹಿತಿ
08. ಡಾ: ಕೆ. ಭುಜಂಗ ಶೆಟ್ಟಿ, ಹೆಸರಾಂತ ನೇತ್ರ ತಜ್ಞ
09. ಪ್ರೊ. ಜಿ.ಎಚ್. ನಾಯಕ್, ಖ್ಯಾತ ವಿಮರ್ಶಕ ಮತ್ತು ಲೇಖಕ
10. ಶ್ರೀ ಸಿ.ವಿ. ಶಿವಶಂಕರ್, ಹಿರಿಯ ಚಲನಚಿತ್ರ ಸಾಹಿತಿಗಳು, ಚಲನಚಿತ್ರ ನಿರ್ದೇಶಕರು, ಸಂಭಾಷಣೆಕಾರರು, ನಟರು ಹಾಗೂ ಕನ್ನಡ ಪರ ಹೋರಾಟಗಾರರು

ಮಾನ್ಯ ಸಭಾನಾಯಕರು(ಶ್ರೀ ಎನ್.ಎಸ್. ಬೋಸ್‌ರಾಜು, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಹಾಗೂ ಮಾನ್ಯ ಶಾಸಕರಾದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಅವರು ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮಾನ್ಯ ಗಣ್ಯರುಗಳ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಸಲ್ಲಿಸಿ ನಂತರ ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಗಳನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲು ತೀರ್ಮಾನಿಸಲಾಯಿತು.

ಸದನವನ್ನು ಮಧ್ಯಾಹ್ನ 1.40 ಗಂಟೆಗೆ ಮುಂದೂಡಿ ದಿನಾಂಕ: 04.07.2023ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ.**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ –1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಂಗಳವಾರ, ದಿನಾಂಕ:04.07.2023**

**(02)**

ಸದನವು ಬೆಳಗ್ಗೆ:11.10 ಗಂಟೆಗೆ ಮಾನ್ಯ ಉಪ ಸಭಾಪತಿಯವರ **(ಶ್ರೀ ಎಂ.ಕೆ. ಪ್ರಾಣೇಶ್)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**1. ನೂತನ ಸಚಿವರುಗಳ ಪರಿಚಯ**

ಶ್ರೀ ಕೃಷ್ಣಬೈರೇಗೌಡ, ಮಾನ್ಯ ಕಂದಾಯ ಸಚಿವರು, ಇವರು ತಮ್ಮನ್ನು ಸದನಕ್ಕೆ ಪರಿಚಯಿಸಿಕೊಳ್ಳುತ್ತಾ, ಈ ಕೆಳಕಂಡ ನೂತನ ಸಚಿವರುಗಳನ್ನೂ ಸಹ ಸದನಕ್ಕೆ ಪರಿಚಯಿಸಿದರು.

ಶ್ರೀಯುತರುಗಳಾದ:

1. ಎಂ.ಬಿ. ಪಾಟೀಲ್, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು
2. ಬಿ.ಎಸ್. ಸುರೇಶ್, ಮಾನ್ಯ ನಗರಾಭಿವೃದ್ಧಿ ಸಚಿವರು
3. ರಹೀಂ ಖಾನ್, ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು
4. ಶಿವಾನಂದ ಪಾಟೀಲ್, ಮಾನ್ಯ ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು
5. ಶರಣಬಸಪ್ಪ ದರ್ಶನಾಪೂರ, ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು
6. ಕೆ.ಎನ್. ರಾಜಣ್ಣ, ಮಾನ್ಯ ಸಹಕಾರ ಸಚಿವರು
7. ಎಸ್.ಎಸ್. ಮಲ್ಲಿಕಾರ್ಜುನ, ಮಾನ್ಯ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು

8. ನಸೀರ್ ಅಹಮ್ಮದ್, ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯವರು

9. ಸಲೀಂ ಅಹಮ್ಮದ್, ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು

ಶ್ರೀ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಾದ ಗೃಹ ಜ್ಯೋತಿ, ಯುವ ನಿಧಿ, ಗೃಹಲಕ್ಷ್ಮಿ, ಶಕ್ತಿ ಯೋಜನೆ ಹಾಗೂ ಅನ್ನಭಾಗ್ಯ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ಕುರಿತು ನಿಲುವಳಿ ಸೂಚನೆಯನ್ನು ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರಿದರು.

**"ಗದ್ದಲ"**

ವಿರೋಧ ಪಕ್ಷದ ಮಾನ್ಯ ಸದಸ್ಯರು(ಭಾರತೀಯ ಜನತಾ ಪಕ್ಷ) ಬಾವಿಗಿಳಿದು ಧರಣಿ ಪ್ರಾರಂಭಿಸಿದರು.

ಸದನವು ಬೆಳಿಗ್ಗೆ 11.30 ಗಂಟೆಗೆ ಮುಂದೂಡಿ ಮಧ್ಯಾಹ್ನ 12.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಪ್ರಕಟಿಸಿದರು.

ಸದನವು 12.15 ಗಂಟೆಗೆ ಮಾನ್ಯ ಉಪ ಸಭಾಪತಿಯವರ (ಶ್ರೀ ಎಂ.ಕೆ. ಪ್ರಾಣೇಶ್) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು(ಭಾರತೀಯ ಜನತಾ ಪಕ್ಷ) ಧರಣಿಯನ್ನು ಮುಂದುವರೆಸಿದರು.

ಸದನವು 12.20 ಗಂಟೆಗೆ ಮುಂದೂಡಿ ಮಧ್ಯಾಹ್ನ 1.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಪ್ರಕಟಿಸಿದರು.

ಸದನವು 1.05 ಗಂಟೆಗೆ ಮಾನ್ಯ ಉಪ ಸಭಾಪತಿಯವರ (ಶ್ರೀ ಎಂ.ಕೆ. ಪ್ರಾಣೇಶ್) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು (ಭಾರತೀಯ ಜನತಾ ಪಕ್ಷ) ಸದನದ ಬಾವಿಯಲ್ಲಿ ಧರಣಿ ನಿರತರಾದರು.

ಸದನವು 1.10 ಗಂಟೆಗೆ ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು(ಶ್ರೀ ಎಂ.ಕೆ. ಪ್ರಾಣೇಶ್) ಪ್ರಕಟಿಸಿದರು.

ಸದನವು 3.20 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು (ಭಾರತೀಯ ಜನತಾ ಪಕ್ಷ) ಸದನದ ಬಾವಿಯಲ್ಲಿ ಧರಣಿ ನಿರತರಾದರು.

ಮಾನ್ಯ ಸಭಾಪತಿಯವರು ಧರಣಿ ನಿರತ ಸದಸ್ಯರಿಗೆ ಪ್ರಶ್ನೋತ್ತರ ಅವಧಿಯ ನಂತರ ನಿಲುವಳಿ ಸೂಚನೆ ತೆಗೆದುಕೊಳ್ಳುವ ಬಗ್ಗೆ ತೀರ್ಮಾನಿಸಲಾಗುವುದು. ಸದಸ್ಯರು ಧರಣಿ ಕೈಬಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ತೆರಳುವಂತೆ ಸೂಚಿಸಿದರು. ಆದಾಗ್ಯೂ ಮಾನ್ಯ ವಿರೋಧ ಪಕ್ಷದ ಸದಸ್ಯರು ಧರಣಿಯನ್ನು ಮುಂದುವರೆಸಿದರು.

**"ಗದ್ದಲ"**

ಸದನವು 3.30 ಗಂಟೆಯಲ್ಲಿ ಮುಂದೂಡಿ ಮಧ್ಯಾಹ್ನ 3.45 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

ಸದನವು 4.05 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು(ಭಾರತೀಯ ಜನತಾ ಪಕ್ಷ) ಸದನದ ಬಾವಿಯಲ್ಲಿ ಧರಣಿ ನಿರತರಾದರು.

**"ಗದ್ದಲ"**

**2. ಕಾರ್ಯದರ್ಶಿಯವರ ವರದಿ**

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| **1.** | ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ,2022<br>The Kannada Language comprehensive development Bill,2022<br>**ಕರ್ನಾಟಕ ವಿಧಾನ ಸಭೆಯ ವಿಧೇಯಕ ಸಂಖ್ಯೆ:26** | **10.03.2023** | **ರಾಜ್ಯಪಾಲರು** |
| **2.** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ,2023<br>The Bruhat Bengaluru Mahanagara Palike (Amendment)Bill, 2023<br>**ಕರ್ನಾಟಕ ವಿಧಾನ ಸಭೆಯ ವಿಧೇಯಕ ಸಂಖ್ಯೆ:01** | **10.03.2023** | **ರಾಜ್ಯಪಾಲರು** |
| **3.** | ಕರ್ನಾಟಕ ಧನವಿನಿಯೋಗ ವಿಧೇಯಕ, 2023<br>The Karnataka Appropriation Bill, 2023<br>**ಕರ್ನಾಟಕ ವಿಧಾನ ಸಭೆಯ ವಿಧೇಯಕ ಸಂಖ್ಯೆ:02** | **10.03.2023** | **ರಾಜ್ಯಪಾಲರು** |

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| **4.** | ಕರ್ನಾಟಕ ಧನವಿನಿಯೋಗ (ಲೇಖಾನುದಾನ)ವಿಧೇಯಕ, 2023<br>The Karnataka Appropriation (Vote on Account)Bill, 2023<br>**ಕರ್ನಾಟಕ ವಿಧಾನ ಸಭೆಯ ವಿಧೇಯಕ ಸಂಖ್ಯೆ:03** | **10.03.2023** | **ರಾಜ್ಯಪಾಲರು** |
| **5.** | ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣತೆರಿಗೆ (ತಿದ್ದುಪಡಿ) ವಿಧೇಯಕ, 2023<br>The Karnataka Tax on Profession, Trades, callings and Employments (Amendment) Bill, 2023<br>**ಕರ್ನಾಟಕ ವಿಧಾನ ಸಭೆಯ ವಿಧೇಯಕ ಸಂಖ್ಯೆ:06** | **13.03.2023** | **ರಾಜ್ಯಪಾಲರು** |
| **6.** | **ಸಪ್ತಗಿರಿ ಎನ್.ಪಿ.ಎಸ್. ವಿಶ್ವವಿದ್ಯಾಲಯ ವಿಧೇಯಕ, 2022,**<br>(2022ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:40.)<br>The Sapthagiri NPS University Bill,2022 | **13.03.2023** | **ರಾಜ್ಯಪಾಲರು** |

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| **7.** | **ಜಿ.ಎಂ ವಿಶ್ವವಿದ್ಯಾಲಯ ವಿಧೇಯಕ,2022,**<br>(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ:38.)<br>The G.M University Bill,2022 | **13.03.2023** | **ರಾಜ್ಯಪಾಲರು** |
| **8.** | **ಬಿ.ಎಮ್.ಎಸ್. ವಿಶ್ವವಿದ್ಯಾಲಯ ವಿಧೇಯಕ, 2023** (2023ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:05.)<br>The G.M University Bill,2022 | **13.03.2023** | **ರಾಜ್ಯಪಾಲರು** |
| **9.** | **ಕಿಷ್ಕಿಂದ ವಿಶ್ವವಿದ್ಯಾಲಯ ವಿಧೇಯಕ,2022,**<br>(2022ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:37.)<br>The KISHKINDA University Bill,2022 | **13.03.2023** | **ರಾಜ್ಯಪಾಲರು** |
| **10.** | **ವಿಷಯ: ಟಿ. ಜಾನ್ ವಿಶ್ವವಿದ್ಯಾಲಯ ವಿಧೇಯಕ,2022,**<br>(2022ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:39.)<br>The T.JOHN University Bill,2022 | **13.03.2023** | **ರಾಜ್ಯಪಾಲರು** |

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| **11.** | **ರಾಜ್ಯ ಒಕ್ಕಲಿಗರ ಸಂಘ ವಿಶ್ವವಿದ್ಯಾಲಯ ವಿಧೇಯಕ,2022,**(2022ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:36.)<br><br>Rajya Vokkaligara Sangha University Bill,2022 | **13.03.2023** | **ರಾಜ್ಯಪಾಲರು** |
| **12.** | **ಆಚಾರ್ಯ ವಿಶ್ವವಿದ್ಯಾಲಯ ವಿಧೇಯಕ, 2022,**<br>(2022ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:41)<br><br>The Acharya University Bill,2022 | **13.03.2023** | **ರಾಜ್ಯಪಾಲರು** |

**3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಒದಗಿಸಲಾಗಿರುವ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದನೇ ಮತ್ತು ಎರಡನೇ ಪಟ್ಟಿಯನ್ನು ಮಾನ್ಯ ಸಭಾನಾಯಕರು ಹಾಗೂ ಸಂಬಂಧಪಟ್ಟ ಸಚಿವರುಗಳು ಮಂಡಿಸಿದರು.

**4. ಪ್ರಶ್ನೋತ್ತರ**

ದಿನಾಂಕ:04ನೇ ಜುಲೈ, 2023, ಸಮೂಹ–II, ಪಟ್ಟಿ–1ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 69 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾಪತಿಯವರು ಮಂಡಿಸಿದರು.

ಸದನವನ್ನು ಸಂಜೆ 4.20 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:05.07.2023ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**
ಕಾರ್ಯದರ್ಶಿ.

**ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಬುಧವಾರ, ದಿನಾಂಕ:05.07.2023**

**(03)**

ಸದನವು ಬೆಳಗ್ಗೆ: 11.20 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು (ಭಾರತೀಯ ಜನತಾ ಪಕ್ಷ) ಭಾವಿಯಲ್ಲಿ ಧರಣಿ ನಿರತರಾದರು.

**"ಗದ್ದಲ"**

ಬೆಳಿಗ್ಗೆ 11.25 ಗಂಟೆಯಲ್ಲಿ ಸದನವನ್ನು 10 ನಿಮಿಷಗಳು ಮುಂದೂಡಿ 11.35ಕ್ಕೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

ಸದನವು ಬೆಳಿಗ್ಗೆ 11.55 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು (ಭಾರತೀಯ ಜನತಾ ಪಕ್ಷ) ಬಾವಿಯಲ್ಲಿ ಧರಣಿ ನಿರತರಾದರು.

ಮಾನ್ಯ ಸಭಾಪತಿಯವರು ಹೊಸದಾಗಿ ನಿಲುವಳಿ ಸೂಚನೆ ನೀಡುವಂತೆ ತಿಳಿಸಿದ ಮೇರೆಗೆ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

**1. ಪ್ರಕಟಣೆ**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ

ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಕೆಳಕಂಡ ಶಾಸಕರುಗಳನ್ನು ನಾಮನಿರ್ದೇಶನ ಮಾಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

1. ಶಶೀಲ್ ಜಿ. ನಮೋಶಿ
2. ಡಾ: ತೇಜಸ್ವಿನಿಗೌಡ
3. ಮರಿತಿಬ್ಬೇಗೌಡ
4. ಮಂಜುನಾಥ ಭಂಡಾರಿ

**2. ನೂತನ ಸಚಿವರುಗಳ ಪರಿಚಯ**

ಮಾನ್ಯ ಸಭಾನಾಯಕರು (ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಈ ಕೆಳಕಂಡ ನೂತನ ಸಚಿವರುಗಳನ್ನು ಸದನಕ್ಕೆ ಪರಿಚಯಿಸಿದರು.

ಶ್ರೀಯುತರುಗಳಾದ:

1. ರಾಮಲಿಂಗರೆಡ್ಡಿ, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
2. ಸತೀಶ್ ಜಾರಕಿಹೊಳಿ, ಮಾನ್ಯ ಲೋಕೋಪಯೋಗಿ ಸಚಿವರು
3. ಸಂತೋಷ್ ಎಸ್. ಲಾಡ್, ಮಾನ್ಯ ಕಾರ್ಮಿಕ ಸಚಿವರು
4. ಆರ್.ಬಿ. ತಿಮ್ಮಾಪೂರ, ಮಾನ್ಯ ಅಬಕಾರಿ ಸಚಿವರು
5. ಕೆ. ವೆಂಕಟೇಶ್, ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು
6. ಮಂಕಾಳ ವೈದ್ಯ, ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು
7. ಡಾ: ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವರು

**3. ಪ್ರಶ್ನೋತ್ತರ**

ದಿನಾಂಕ: 05.07.2023ರಂದು ಸದನದಲ್ಲಿ ಉತ್ತರಿಸುವ ಸಮೂಹ–IIIರ 2ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 16(137)
2. 17(181)
3. 18(109) ಶ್ರೀ ಗೋವಿಂದರಾಜು ಪರವಾಗಿ ಶ್ರೀ ಎಸ್.ಎಲ್. ಭೋಜೇಗೌಡ
4. 19(114)
5. 20(178)
6. 21(99) ಡಾ: ವೈ.ಎ. ನಾರಾಯಣಸ್ವಾಮಿ ಪರವಾಗಿ ಶ್ರೀ ಕೆ.ಎ. ತಿಪ್ಪೇಸ್ವಾಮಿ
7. 22(113)
8. 23(162)
9. 24(88)
10. 25(124)
11. 26(179)
12. 27(104)

**"ಗದ್ದಲ"**

13. 28(169) ಧರಣಿ ನಿರತರಾಗಿದ್ದರು
14. 29(177) ಧರಣಿ ನಿರತರಾಗಿದ್ದರು
15. 30(112) ಧರಣಿ ನಿರತರಾಗಿದ್ದರು

ದಿನಾಂಕ:05.07.2023ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIIರ 2ನೇ ಪಟ್ಟಿಯ ಒಟ್ಟು 88 ಪ್ರಶ್ನೆಗಳ ಪೈಕಿ 61 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

**4. ಚುನಾವಣಾ ಪ್ರಸ್ತಾವ**

**2023–24ನೇ ಸಾಲಿನ ಈ ಕೆಳಕಂಡ ವಿಧಾನ ಮಂಡಲದ/ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ, ವಿಶ್ವವಿದ್ಯಾಲಯದ ಸೆನೆಟ್ ಹಾಗೂ ವ್ಯವಸ್ಥಾಪನ ಮಂಡಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸಬೇಕೆಂಬ ಪ್ರಸ್ತಾವವನ್ನು ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಂಡಿಸಿದರು.**

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸರ್ಕಾರಿ ಭರವಸೆಗಳ ಸಮಿತಿಗೆ ಒಂಭತ್ತು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 250(1)ನೇ ನಿಯಮದ ಅನುಸಾರವಾಗಿ ಈ ಸಭೆ **ಹಕ್ಕುಬಾಧ್ಯತಾ ಸಮಿತಿಗೆ ಏಳು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 349(2)ನೇ ನಿಯಮದ ಅನುಸಾರವಾಗಿ ಈ ಸಭೆ **ವಸತಿ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಈ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 261(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಗೆ ಎಂಟು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ

ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಉ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 245(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಊ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 248ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಉದ್ಯಮಗಳ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

ಋ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 254(1)ನೇ ನಿಯಮದ ಅನುಸಾರವಾಗಿ ಈ ಸಭೆ **ಅಧೀನ ಶಾಸನ ರಚನಾ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಎ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 264ನೇ ನಿಯಮದ ಅನುಸಾರವಾಗಿ ಈ ಸಭೆ **ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಏ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ 267ನೇ ನಿಯಮದಅನುಸಾರವಾಗಿ ಈ ಸಭೆ **ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಐ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಅಧಿನಿಯಮ 1994 ಕಲಂ 21(1)(viii)ರ ರೀತ್ಯಾ ವಿಧಾನ ಪರಿಷತ್ತಿನ ಒಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಒ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ 1992 ಪ್ರಕರಣ 18(1)(9) ರನ್ವಯ ವಿಧಾನ ಪರಿಷತ್ತಿನ ಒಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಮಧ್ಯಾಹ್ನ 1.20 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

ಮಧ್ಯಾಹ್ನ 3.40 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಪ್ರಶ್ನೆ ಸಂಖ್ಯೆ:27(104)ಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು(ಭಾರತೀಯ ಜನತಾ ಪಕ್ಷ) ಧರಣಿ ನಡೆಸಿದ್ದು, ಬಾವಿಯಲ್ಲಿ ಪುನ: ಧರಣಿ ನಿರತರಾದರು.

ಮಾನ್ಯ ಸಭಾಪತಿಯವರು ಅರ್ಧ ಗಂಟೆ ಚರ್ಚೆಗೆ ಸೂಚನೆ ನೀಡುವಂತೆ ಸೂಚಿಸಿದರು.

ಧರಣಿ ನಿರತ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

**5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ**

**"**2023ನೇ ಜುಲೈ, 03ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ**"** ಎಂದು **ಶ್ರೀ ಯು.ಬಿ. ವೆಂಕಟೇಶ್,** ಅವರು ಸೂಚಿಸಿದ್ದು, **ಶ್ರೀ ಎಂ. ನಾಗರಾಜು,** ಅವರು ಅನುಮೋದಿಸಿದರು.

1. ಶ್ರೀ ಯು.ಬಿ. ವೆಂಕಟೇಶ್ ಅವರು ಚರ್ಚೆಯನ್ನು ಪ್ರಾರಂಭಿಸಿದರು.

ಸಂಜೆ 4.20 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಸಭಾಪತಿಯವರ ಪೀಠದಲ್ಲಿ ಆಸೀನರಾದರು.

2. ಶ್ರೀ ಎಂ. ನಾಗರಾಜು

**6. ನೂತನ ಸಚಿವರ ಪರಿಚಯ**

ಶ್ರೀ ಸಲೀಂ ಅಹಮದ್, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಿದರು.

ಶ್ರೀ ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು

**7. ಶೂನ್ಯ ವೇಳೆ**

1. **ಶ್ರೀ ಮರಿತಿಬ್ಬೇಗೌಡ ಅವರು** ತಾಲ್ಲೂಕು ಅಕ್ಷರ ದಾಸೋಹ ಹುದ್ದೆಗೆ ಇಲಾಖೆಯ ಬೋಧಕೇತರ ಪತ್ರಾಂಕಿತ ವ್ಯವಸ್ಥಾಪಕ ಸಿಬ್ಬಂದಿಯನ್ನು ನೇಮಿಸುವ ಬದಲಾಗಿ ಶಾಲಾ ಮುಖ್ಯ ಶಿಕ್ಷಕರನ್ನೇ ಮುಂದುವರೆಸುವ ಬಗ್ಗೆ ಪ್ರಸ್ತಾಪಿಸಿದರು.

   ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

2. **ಶ್ರೀ ಕೆ.ಎ. ತಿಪ್ಪೇಸ್ವಾಮಿ** ಅವರು ರಾಜ್ಯದಲ್ಲಿ ಗೊಲ್ಲರಹಟ್ಟಿ, ತಾಂಡಾ, ವಡ್ಡರಹಟ್ಟಿ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಜನವಸತಿಗಳಾದ ಮಜರೆ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಮೂಲಕ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

3. **ಶ್ರೀ ಕೆ. ಹರೀಶ್ ಕುಮಾರ್** ಅವರು ಹವಾಮಾನ ಆಧಾರಿತ ಬೆಳೆ ವಿಮೆ ಗಡುವನ್ನು ಜುಲೈ ಅಂತ್ಯದವರೆಗೆ ವಿಸ್ತರಿಸುವ ಮೂಲಕ ಕೂಡಲೇ ಅರ್ಜಿಗಳನ್ನು ಆಹ್ವಾನಿಸಿ ಬೆಳೆಗಾರರಿಗೆ ಅನುಕೂಲ ಮಾಡಿಕೊಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

4. **ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ,** ಅವರು ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜನರಿಗೆ ಶುದ್ಧವಾದ ಕುಡಿಯುವ ನೀರು ಪೂರೈಕೆಯಾಗದೇ ಕಲುಷಿತ ನೀರು ಸೇವನೆಯಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದು, ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಎಚ್ಚರಿಕೆ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

5. **ಶ್ರೀ ಡಿ.ಎಸ್. ಅರುಣ್** ಅವರು ರಾಷ್ಟ್ರಗೀತೆ ಮತ್ತು ನಾಡಗೀತೆಯ ಶಿಷ್ಠಾಚಾರ ಉಲ್ಲಂಘನೆ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವಂತೆ ವರ್ತಿಸಿರುವ ಡಿ.ವೈ.ಎಸ್.ಪಿ. ಮಿಥುನ್ ಅವರ ವಿರುದ್ಧ ತನಿಖೆಗೆ ಆದೇಶ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

6. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಭಾವಿ ಶಿಕ್ಷಕರು ನಡೆಸುತ್ತಿರುವ ಧರಣಿ ಕುರಿತಂತೆ ಕೂಡಲೇ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ವಿತರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

7. ಶ್ರೀ **ಎಂ. ನಾಗರಾಜು** ಅವರು ಕೂಡ್ಲಗಿ ತಾಲ್ಲೂಕು ಬಡೇಲಡಕು ಗ್ರಾಮ ಪಂಚಾಯತಿ ವ್ಯಾಪ್ತಿಯ ದೊಡ್ಡ ಗೊಲ್ಲರ ಹಟ್ಟಿ ಗ್ರಾಮದಲ್ಲಿ ಜಲಜೀವನ್ ಮಿಷನ್ ಕಾಮಗಾರಿ ಯೋಜನೆಯಡಿ ಅವೈಜ್ಞಾನಿಕ ಕಾಮಗಾರಿ ನಡೆಸಿದ್ದು, ಕಲುಷಿತ ನೀರನ್ನು ಸೇವಿಸಿ ಗ್ರಾಮದ 13 ಜನರು ಅಸ್ವಸ್ಥಗೊಂಡಿದ್ದು, ಆವೈಜ್ಞಾನಿಕ ಕಾಮಗಾರಿ ಕೈಗೊಂಡಿರುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

## ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ

3. ಡಾ: ತೇಜಸ್ವಿನಿಗೌಡ

ಸಂಜೆ 5.40 ಗಂಟೆಯಲ್ಲಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪೀಠದಲ್ಲಿ ಆಸೀನರಾದರು.

## 8. ಗಮನ ಸೆಳೆಯುವ ಸೂಚನೆ

**ಶ್ರೀ ಎಸ್. ರವಿ** ಅವರು ಯಶವಂತಪುರ ಮಾರುಕಟ್ಟೆಯಿಂದ ಬೆಳ್ಳುಳ್ಳಿ, ಈರುಳ್ಳಿ, ಆಲೂಗೆಡ್ಡೆ ಹಾಗೂ ಶುಂಠಿ ವ್ಯಾಪಾರವನ್ನು ಪೂರ್ಣ ಪ್ರಮಾಣದಲ್ಲಿ ದಾಸನಪುರಕ್ಕೆ ಸ್ಥಳಾಂತರ ಮಾಡದಿರುವುದರಿಂದ ಸಾರ್ವಜನಿಕರು ಹಾಗೂ

ವರ್ತಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಗಮನ ಸೆಳೆದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಉತ್ತರಿಸಿದರು.

ಶ್ರೀ ಎಸ್. ರವಿ, ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಸ್ಪಷ್ಟೀಕರಣ ನೀಡಿದರು.

ಸಂಜೆ 6.50 ಗಂಟೆಯಲ್ಲಿ ಸದನವನ್ನು ಮುಂದೂಡಿ ದಿನಾಂಕ:06.07.2023ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**
**ಕಾರ್ಯದರ್ಶಿ.**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಗುರುವಾರ, ದಿನಾಂಕ:06.07.2023**

**(04)**

ಸದನವು ಬೆಳಗ್ಗೆ: 11.20 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಅಭಿನಂದನೆ

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಎಂ. ನಾಗರಾಜು, ಶ್ರೀ ಮರಿತಿಬ್ಬೇಗೌಡ ಹಾಗೂ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರುಗಳು ನೂತನ ಸರ್ಕಾರ ರಚನೆಗೊಂಡ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಸದನದ ಎಲ್ಲಾ ಸದಸ್ಯರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿ ಸ್ವಾಗತ ಕೋರಿದರು.

## 2. ಪ್ರಶ್ನೋತ್ತರ

ದಿನಾಂಕ:06.07.2023ರಂದು ಸದನದಲ್ಲಿ ಉತ್ತರಿಸುವ ಸಮೂಹ–IVರ 3ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 31(245+212+222) | ಕಾಲಾವಕಾಶ |
| 2. | 32(260) | |
| 3. | 33(187) | |
| 4. | 34(211) | ಶ್ರೀ ಎಂ.ಎಲ್. ಅನಿಲ್ ಕುಮಾರ್ ಪರವಾಗಿ ಶ್ರೀ ಗೋವಿಂದರಾಜು |

**3. ನೂತನ ಸಚಿವರುಗಳ ಪರಿಚಯ**

ಮಾನ್ಯ ಸಭಾನಾಯಕರು (ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಈ ಕೆಳಕಂಡ ನೂತನ ಸಚಿವರುಗಳನ್ನು ಸದನಕ್ಕೆ ಪರಿಚಯಿಸಿದರು.

ಶ್ರೀಯುತರುಗಳಾದ:

1. ಎಚ್.ಕೆ. ಪಾಟೀಲ್, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು
2. ಡಾ: ಜಿ. ಪರಮೇಶ್ವರ, ಮಾನ್ಯ ಗೃಹ ಸಚಿವರು
3. ಬಿ.ಜೆಡ್. ಜಮೀರ್ ಅಹಮದ್ ಖಾನ್, ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
4. ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳಕರ್, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
5. ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು
6. ಪ್ರಿಯಾಂಕ್ ಖರ್ಗೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು
7. ಎನ್. ಚಲುವರಾಯಸ್ವಾಮಿ, ಮಾನ್ಯ ಕೃಷಿ ಸಚಿವರು
8. ಬಿ. ನಾಗೇಂದ್ರ, ಮಾನ್ಯ ಯುವಜನ ಸೇವೆಗಳು, ಕ್ರೀಡೆಗಳು ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು

**ಪ್ರಶ್ನೋತ್ತರ**

5. 35(242)
6. 36(200)

7. 37(274)
8. 38(267)
9. 39(217)
10. 40(195)
11. 41(203)
12. 42(273)
13. 43(270)
14. 44(278)
15. 45(276)

ದಿನಾಂಕ:06.07.2023ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IVರ 3ನೇ ಪಟ್ಟಿಯ ಒಟ್ಟು 84 ಪ್ರಶ್ನೆಗಳ ಪೈಕಿ **57** ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

**4. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳ ಪಟ್ಟಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು**

01. ಶ್ರೀ ಎಂ.ಬಿ. ಪಾಟೀಲ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

02. ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

03. ಶ್ರೀ ಶಿವಾನಂದ ಪಾಟೀಲ, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

04. ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್, ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

05. ಶ್ರೀ ಶರಣ ಬಸಪ್ಪ ದರ್ಶನಾಪೂರ, ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

06. ಶ್ರೀ ಎನ್. ಚಲುವರಾಯಸ್ವಾಮಿ, ಮಾನ್ಯ ಕೃಷಿ ಸಚಿವರು

07. ಶ್ರೀ ರಹೀಂಖಾನ್, ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು

08. ಶ್ರೀ ಡಿ. ಸುಧಾಕರ್, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು

09. ಶ್ರೀ ಬಿ. ನಾಗೇಂದ್ರ, ಮಾನ್ಯ ಯುವಜನ ಸೇವೆಗಳು, ಕ್ರೀಡೆಗಳು ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು

10. ಶ್ರೀ ಬಿ.ಎಸ್. ಸುರೇಶ್, ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

11. ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

**5. ಶೂನ್ಯ ವೇಳೆ**

**1.** **ಶ್ರೀ ತಿಪ್ಪಣ್ಣಪ್ಪ** ಅವರು ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಕಾನೂನು ಬಾಹಿರವಾಗಿ ಮಾದಕ ವಸ್ತುಗಳು ಮಾರಾಟವಾಗುತ್ತಿರುವುದನ್ನು ನಿಯಂತ್ರಿಸಲು ವಿಶೇಷ ಕಾರ್ಯಪಡೆಯನ್ನು ನೇಮಿಸುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರು ಉತ್ತರಿಸಿದರು.

**2.** **ಶ್ರೀ ಎಸ್. ರುದ್ರೇಗೌಡ** ಅವರು ಅವೈಜ್ಞಾನಿಕ ವಿದ್ಯುತ್ ದರ ಪರಿಷ್ಕರಣೆಯನ್ನು ಹಿಂಪಡೆಯುವ ಮೂಲಕ ಕೈಗಾರಿಕಾ ಉದ್ಯಮಗಳಿಗೆ ಹೆಚ್ಚಿನ ಹೊರೆ ಆಗುವುದನ್ನು ತಪ್ಪಿಸುವ ಬಗ್ಗೆ ಪ್ರಸ್ತಾಪಿಸಿದರು.

ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀಮತಿ ಹೇಮಲತಾ ನಾಯಕ್** ಅವರು ರಾಜ್ಯದಲ್ಲಿ ಸಹಜ ಹೆರಿಗೆ ವಿಧಾನಗಳಿಗಿಂತ ಸಿಸೇರಿಯನ್ ಹೆರಿಗೆ ಹೆಚ್ಚಾಗುತ್ತಿರುವುದರಿಂದ ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುವುದರಿಂದ ಸಹಜ ಹೆರಿಗೆಗೆ ಆದ್ಯತೆ ನೀಡುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಮಂಜುನಾಥ್ ಭಂಡಾರಿ** ಅವರು ಜಲಜೀವನ ಮಿಷನ್ ಕಾಮಗಾರಿಯಿಂದ ರಸ್ತೆಗಳಿಗೆ ಹಾನಿಯಾಗುವ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವ ಕುರಿತು ಬಂದಿರುವ ದೂರುಗಳನ್ನು ಪರಿಶೀಲಿಸುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಉತ್ತರಿಸಿದರು.

5. **ಡಾ: ತಳವಾರ ಸಾಬಣ್ಣ** ಅವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕೆ–ಸೆಟ್ ಪರೀಕ್ಷೆಯನ್ನು ನಿಗದಿತ ಅವಧಿಯಲ್ಲಿ ನಡೆಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು.

6. **ಶ್ರೀ ಮರಿತಿಬ್ಬೇಗೌಡ** ಅವರು 1ನೇ ತರಗತಿಗೆ ದಾಖಲಿಸಲು ಜೂನ್ 1ನೇ ತಾರೀಖಿಗೆ ಬದಲಾಗಿ ಜೂನ್ 1ರಿಂದ ಜೂನ್ 30ರ ಒಳಗಿನ ದಿನಾಂಕಗಳಲ್ಲಿ ಜನಸಿದ ಮಕ್ಕಳೆಲ್ಲರಿಗೂ ಪ್ರವೇಶ ನೀಡಲು ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ ಪ್ರಸ್ತಾಪಿಸಿದರು.

ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಡಿ.ಎಸ್. ಅರುಣ್** ಅವರು ಏಕ ಬಳಕೆ ಪ್ಲಾಸ್ಟಿಕ್ ಉತ್ಪಾದನೆಯನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಿದರು.

ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** ಅವರು ರಾಜ್ಯದ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಪ್ರತಿ ವರ್ಷ ಸಂಭವಿಸುವ ಭೂಕುಸಿತ/ಗುಡ್ಡ ಕುಸಿತದಂತಹ ಘಟನೆಗಳನ್ನು ಪರಿಶೀಲಿಸಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಕೆ.ಎ. ತಿಪ್ಪೇಸ್ವಾಮಿ** ಅವರು ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆಯಡಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಂಬುಲೆನ್ಸ್ ವಾಹನ ಚಾಲಕರು ಮತ್ತು ತಾಂತ್ರಿಕ ಸಿಬ್ಬಂದಿಗಳಿಗೆ ಕಳೆದ 04 ತಿಂಗಳುಗಳಿಂದ ವೇತನ ಬಿಡುಗಡೆ ಆಗದೇ ಇರುವ ಬಗ್ಗೆ ಪ್ರಸ್ತಾಪಿಸಿದರು.

ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಪ್ರತಾಪ ಸಿಂಹ ನಾಯಕ್ ಕೆ.** ಅವರು ಅಂಗನವಾಡಿ ಕಾರ್ಯಕರ್ತರು ಬಳಸುತ್ತಿರುವ ಕಳಪೆ ಮೊಬೈಲ್‌ಗಳಿಂದ ಮಾತೃ ಪೂರ್ಣ ಯೋಜನೆಯ ಸಮೀಕ್ಷಾ ಕಾರ್ಯ ವಿಳಂಬವಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಉತ್ತರಿಸಿದರು.

**6. ವರದಿಯನ್ನೊಪ್ಪಿಸುವುದು**

**ಶ್ರೀ ಬಿ.ಎಂ. ಫಾರೂಖ್**(ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ) ಅವರು ಸರ್ಕಾರಿ ಭರವಸೆಗಳ ಸಮಿತಿಯ 49ನೇ ವರದಿಯನ್ನು ಒಪ್ಪಿಸಿದರು.

**7. ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ**

**ಶ್ರೀ ಎನ್. ರವಿಕುಮಾರ್ (ಅಧ್ಯಕ್ಷರು, ವಿಶೇಷ ಸದನ ಸಮಿತಿ) ಅವರು:–**

ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ: 21.03.2023ರಿಂದ 06 ತಿಂಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವನೆಗೆ ಸದನದ ಸಹಮತಿ ಕೋರಿ ಪ್ರಸ್ತಾವವನ್ನು ಮಂಡಿಸಿದರು.

ಸದನದ ಸಹಮತಿ ಪಡೆಯುವ ಪ್ರಸ್ತಾವವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**8. ನಿಲುವಳಿ ಸೂಚನೆ**

ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಸದಸ್ಯರು, ಇವರು ಸರ್ಕಾರ 5 ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದು, ಈ ಎಲ್ಲಾ ಘೋಷಣೆಗಳಿಗೆ ಷರತ್ತುಗಳನ್ನು ವಿಧಿಸುತ್ತಿರುವ ಬಗ್ಗೆ ಹಾಗೂ ಸಾಧಕ–ಬಾಧಕಗಳ ಬಗ್ಗೆ ಅಧ್ಯಯನ ನಡೆಸದೇ ಕೈಗೊಂಡಿರುವ ಯೋಜನೆಗೆ ಲಭ್ಯವಿರುವ ಹಣಕಾಸಿನ ಬಗ್ಗೆ ಚರ್ಚಿಸಲು ನಿಯಮ 59ರ ಅಡಿಯಲ್ಲಿ ಮಾನ್ಯ ಸಭಾಪತಿಯವರ ಅನುಮತಿಯ ಮೇರೆಗೆ ಪ್ರಾಥಮಿಕ ಚರ್ಚೆಯನ್ನು ಪ್ರಾರಂಭಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರು ರಾಜ್ಯಪಾಲರ ಭಾಷಣದ ವಂದನಾರ್ಪಣಾ ಮೇಲಿನ ಪ್ರಸ್ತಾವದ ಚರ್ಚೆಯಲ್ಲಿ ಚರ್ಚಿಸಬಹುದು. ನಿಯಮ 59ರ ಚರ್ಚೆಗೆ ಅವಕಾಶವಿಲ್ಲ ಎಂದು ಉತ್ತರಿಸಿದರು.

ಮಧ್ಯಾಹ್ನ 2.10 ಗಂಟೆಯಲ್ಲಿ ಸದನವನ್ನು ಮುಂದೂಡಿ ಮಧ್ಯಾಹ್ನ 3.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

ಮಧ್ಯಾಹ್ನ 3.45 ಗಂಟೆಗೆ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 9. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

4. ಶ್ರೀ ಎಸ್.ಎಲ್. ಭೋಜೇಗೌಡ

ಮಧ್ಯಾಹ್ನ 3.55 ಗಂಟೆಯಲ್ಲಿ ಶ್ರೀ ಶಶಿಲ್ ಜಿ. ನಮೋಶಿ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

5. ಶ್ರೀ ಕೆ. ಹರೀಶ್ ಕುಮಾರ್
6. ಶ್ರೀ ಕೆ.ಎಸ್. ನವೀನ್

ಸಂಜೆ 5.15 ಗಂಟೆಯಲ್ಲಿ ಮಾನ್ಯ ಸಭಾಪತಿಯವರು (ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಸಭಾಪತಿಯವರ ಪೀಠದಲ್ಲಿ ಆಸೀನರಾದರು.

## 10. ಪ್ರಕಟಣೆ

ದಿನಾಂಕ:06.07.2023ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

- ವಿಧಾನ ಪರಿಷತ್ತಿನ 150ನೇ ಅಧಿವೇಶನದ ಉಪವೇಶನಗಳ ಕಾರ್ಯಕಲಾಪಗಳನ್ನು ದಿನಾಂಕ:21.07.2023 ರವರೆಗೆ ಮುಂದುವರೆಸಲು ತೀರ್ಮಾನಿಸಲಾಗಿರುತ್ತದೆ.
- ದಿನಾಂಕ:11.07.2023ರವರೆಗೂ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಚರ್ಚೆ ನಡೆಸಲು ತೀರ್ಮಾನಿಸಲಾಗಿರುತ್ತದೆ.

- ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ನಡೆದ ಚರ್ಚೆಗೆ ದಿನಾಂಕ:12.07.2023ರ ಬುಧವಾರದಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಲಿದ್ದಾರೆ.

- ದಿನಾಂಕ:07.07.2023ರಂದು ಸನ್ಮಾನ್ಯ ಮುಖ್ಯಮಂತ್ರಿಗಳು 2023–2024ನೇ ಸಾಲಿನ ಆಯವ್ಯಯ (ಪರಿಷ್ಕೃತ) ಮಂಡಿಸಲಿದ್ದಾರೆ.

- ದಿನಾಂಕ:12.07.2023 ರಿಂದ 20.07.2023ರವರೆಗೆ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ.

- ದಿನಾಂಕ:21.07.2023 ರಂದು ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆಗೆ ಸರ್ಕಾರದ ಉತ್ತರ ಹಾಗೂ ಧನವಿನಿಯೋಗ ವಿಧೇಯಕ ಹಾಗೂ ಹಣಕಾಸು ವಿಧೇಯಕಗಳ ಮಂಡನೆ ಹಾಗೂ ಅಂಗೀಕಾರ.

**11. ಗಮನ ಸೆಳೆಯುವ ಸೂಚನೆಗಳು**

01. **ಡಾ॥ ವೈ.ಎ. ನಾರಾಯಣಸ್ವಾಮಿ, ಶ್ರೀ ಎಸ್.ವ್ಹಿ. ಸಂಕನೂರ ಹಾಗೂ ಶ್ರೀ ಮರಿತಿಬ್ಬೇಗೌಡ** ಅವರುಗಳು ದಿನಾಂಕ:01.04.2006ರ ನಂತರ ನೇಮಕಗೊಂಡಿರುವ ಸರ್ಕಾರಿ ನೌಕರರಿಗೆ ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೇ ಪಿಂಚಣಿ ಯೋಜನೆಯನ್ನು ಮುಂದುವರೆಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆದರು.

ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಎಸ್.ವ್ಹಿ. ಸಂಕನೂರ
2. ಶ್ರೀ ಮರಿತಿಬ್ಬೇಗೌಡ

3. ಶ್ರೀ ಶಶಿಲ್ ಜಿ. ನಮೋಶಿ

4. ಶ್ರೀ ಎಸ್.ಎಲ್. ಭೋಜೇಗೌಡ

5. ಶ್ರೀ ಅ. ದೇವೇಗೌಡ

6. ಡಾ: ವೈ.ಎ. ನಾರಾಯಣಸ್ವಾಮಿ

ಮಾನ್ಯ ಉಪ ಮುಖ್ಯ ಮಂತ್ರಿಯವರು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಸ್ಪಷ್ಟೀಕರಣ ನೀಡಿದರು.

02. **ಶ್ರೀಯುತರುಗಳಾದ ಬಿ.ಎಂ. ಫಾರೂಖ್, ಕೆ.ಎ. ತಿಪ್ಪೇಸ್ವಾಮಿ ಹಾಗೂ ಶರವಣ ಟಿ.ಎ.** ಅವರುಗಳು ಬೆಂಗಳೂರು ನಗರದ ಸುತ್ತಲೂ ಹೊರ ವರ್ತುಲ ರಸ್ತೆಯನ್ನು ನಿರ್ಮಿಸುವ ಯೋಜನೆಯ ಕಾಮಗಾರಿಯನ್ನು ತುರ್ತಾಗಿ ಅನುಷ್ಠಾನಗೊಳಿಸುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆದರು.

ಮಾನ್ಯ ಉಪ ಮುಖ್ಯ ಮಂತ್ರಿಯವರು ಉತ್ತರಿಸಿದರು.

ಶ್ರೀ ಕೆ.ಎ. ತಿಪ್ಪೇಸ್ವಾಮಿ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಉಪ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ನೀಡಿದರು.

ಸಂಜೆ 6.30 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:07.07.2023 ರಂದು ಮಧ್ಯಾಹ್ನ 12.00 ಗಂಟೆಗೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಶುಕ್ರವಾರ, ದಿನಾಂಕ:07.07.2023**

**(05)**

ಸದನವು ಮಧ್ಯಾಹ್ನ 12.00 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ವಿತ್ತೀಯ ಕಾರ್ಯಕಲಾಪ**

2023–2024ನೇ ಸಾಲಿನ ಅಯವ್ಯಯ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಮಂಡಿಸಿದರು.

ಮಧ್ಯಾಹ್ನ 12.15 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:10.07.2023ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಸೋಮವಾರ, ದಿನಾಂಕ:10.07.2023**

**(06)**

ಸದನವು ಬೆಳಗ್ಗೆ: 11.08 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ನೂತನ ಸಚಿವರುಗಳ ಪರಿಚಯ

ಮಾನ್ಯ ಸಭಾನಾಯಕರು (ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಈ ಕೆಳಕಂಡ ನೂತನ ಸಚಿವರುಗಳನ್ನು ಸದನಕ್ಕೆ ಪರಿಚಯಿಸಿದರು.

ಶ್ರೀಯುತರುಗಳಾದ:

1. ಕೆ.ಹೆಚ್. ಮುನಿಯಪ್ಪ, ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು
2. ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
3. ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು
4. ಕೆ.ಜೆ. ಜಾರ್ಜ್, ಇಂಧನ ಸಚಿವರು
5. ಈಶ್ವರ್ ಖಂಡ್ರೆ, ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು
6. ಮಧು ಬಂಗಾರಪ್ಪ, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು

## 2. ನಿಲುವಳಿ ಸೂಚನೆ

ಶ್ರೀಯುತರುಗಳಾದ ಕೋಟ ಶ್ರೀನಿವಾಸ ಪೂಜಾರಿ, ಎಸ್.ವ್ಹಿ. ಸಂಕನೂರ ಹಾಗೂ ಪ್ರತಾಪ್ ಸಿಂಹ ನಾಯಕ್ ಕೆ. ಅವರುಗಳು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಶಾಂತಿದೂತ ಜೈನಮುನಿ ಕಾಮಕುಮಾರ ನಂದಿ ಅವರನ್ನು ದುಷ್ಕರ್ಮಿಗಳು ವಿದ್ಯುತ್ ಶಾಕ್ ನೀಡಿ, ಹತ್ಯೆ ಮಾಡಿ ನಂತರ ತುಂಡು ತುಂಡಾಗಿ ಕತ್ತರಿಸಿ ಕೊಳವೆ ಬಾವಿಗೆ ಹಾಕಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಗುರುತಿಸುವಲ್ಲಿ ಸರ್ಕಾರ ವಿಫಲವಾಗಿರುವ ಕುರಿತು ನಿಯಮ 59ರ ಅಡಿಯಲ್ಲಿ ಸೂಚನೆಯನ್ನು ಮಾನ್ಯ ಸಭಾಪತಿಯವರು ನಿಯಮ 68ಕ್ಕೆ ಪರಿವರ್ತಿಸಿ ಪ್ರಶ್ನೋತ್ತರ ನಂತರ ಚರ್ಚೆಗೆ ಅವಕಾಶ ನೀಡುವುದಾಗಿ ಪ್ರಕಟಿಸಿದರು.

## 3. ಪ್ರಶ್ನೋತ್ತರ

ದಿನಾಂಕ:10.07.2023ರಂದು ಸದನದಲ್ಲಿ ಉತ್ತರಿಸುವ ಸಮೂಹ–Iರ 5ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 61(498) | |
| 2. | 62(442) | |
| 3. | 63(424) | |
| 4. | 64(432) | |
| 5. | 65(505) | |
| 6. | 66(496) | |
| 7. | 67(499) | |
| 8. | 68(509) | |
| 9. | 69(487) | |
| 10. | 70(418) | ಗೈರು ಹಾಜರಿ |
| 11. | 71(494) | |

12. 72(481)
13. 73(516)
14. 74(453)
15. 75(437)

ದಿನಾಂಕ:10.07.2023ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Iರ 5ನೇ ಪಟ್ಟಿಯ ಒಟ್ಟು 125 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

**4. ಶೂನ್ಯವೇಳೆ**

1. **ಶ್ರೀ ಶಾಂತರಾಮ್ ಬುಡ್ನ ಸಿದ್ದಿ ಅವರು** ಅರಣ್ಯ ಬೆಳೆಸುವ ಕಾರ್ಯದಲ್ಲಿ ವಿಷಪೂರಿತ ಕೀಟನಾಶಕಗಳನ್ನು ಉಪಯೋಗಿಸಿ ಜೀವ ವೈವಿಧ್ಯಗಳಿಗೆ ಹಾನಿ ಉಂಟಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದರು.

   ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

2. **ಶ್ರೀ ಶರವಣ ಟಿ.ಎ. ಅವರು** ರೈತರ ಬೆಳೆ ವಿಮೆ ಪರಿಹಾರ ನೀಡುವಲ್ಲಿ ಸರ್ಕಾರ ಅಥವಾ ಎಲ್.ಐ.ಸಿ. ವಿಮಾ ಕಂಪನಿಗೆ ಅನುಷ್ಠಾನದ ಹೊಣೆ ನೀಡುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

3. **ಶ್ರೀ ಯು.ಬಿ. ವೆಂಕಟೇಶ್ ಅವರು** ಬೆಂಗಳೂರಿನ ಘನತ್ಯಾಜ್ಯ ನಿರ್ವಹಣೆಯಲ್ಲಿ ಆಗಿರುವ ಹಣ ದುರುಪಯೋಗ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

4. **ಶ್ರೀ ಡಿ.ಎಸ್. ಅರುಣ್ ಅವರು** ಕುವೆಂಪು ವಿಶ್ವವಿದ್ಯಾನಿಲಯದ ಹಗರಣಗಳ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರವನ್ನು ನಂತರ ನೀಡುವುದಾಗಿ ತಿಳಿಸಿದರು.

5. **ಶ್ರೀ ಮಂಜುನಾಥ್ ಭಂಡಾರಿ ಅವರು** ಬಿಸಿಯೂಟ ಸಿಬ್ಬಂದಿಗಳ ವೇತನವನ್ನು ಹೆಚ್ಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

6. **ಶ್ರೀ ಎಸ್.ವ್ಹಿ. ಸಂಕನೂರ ಅವರು** ಗದಗ ಜಿಲ್ಲೆಯ ನಾಗಾವಿ ಗ್ರಾಮದ ಬಗರ ಹುಕುಂ ಸಾಗುವಳಿದಾರರಿಗೆ ಪರಿಹಾರ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

7. **ಶ್ರೀ ಶಶಿಲ್ ಜಿ. ನಮೋಶಿ ಅವರು** ರಾಜ್ಯದ ಅದರಲ್ಲೂ ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

8. **ಶ್ರೀ ಕೇಶವ ಪ್ರಸಾದ್ ಎಸ್. ಅವರು** ರಾಜ್ಯದ ದ್ರಾಕ್ಷಿ ಬೆಳೆಗಾರರ ಹಿತರಕ್ಷಣೆಗೆ ಬೆಂಬಲ ಬೆಲೆ ಹಾಗೂ ಸಾಲ ಮನ್ನಾ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

9. **ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು** ಗ್ರಾಮ ಪಂಚಾಯಿತಿ ಸದಸ್ಯರ ಆಸ್ತಿ ವಿವರ ಸಲ್ಲಿಸುವ ವ್ಯವಸ್ಥೆಯನ್ನು ರದ್ದುಗೊಳಿಸುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

10. **ಡಾ: ವೈ.ಎ. ನಾರಾಯಣಸ್ವಾಮಿ ಅವರು** ಸರ್ಕಾರಿ ಶಾಲಾ ಮಕ್ಕಳು ಸಮವಸ್ತ್ರ ಹೊಲಿಸಿಕೊಳ್ಳುವ ವೆಚ್ಚವನ್ನು ಶಿಕ್ಷಣ ಇಲಾಖೆ ವತಿಯಿಂದ ಭರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

## 5. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಮರಿತಿಬ್ಬೇಗೌಡ ಅವರು** ತಾಲ್ಲೂಕು ಅಕ್ಷರ ದಾಸೋಹ ಹುದ್ದೆಗೆ ಇಲಾಖೆಯ ಬೋಧಕೇತರ ಪತ್ರಾಂಕಿತ ವ್ಯವಸ್ಥಾಪಕ ಸಿಬ್ಬಂದಿಯನ್ನು ನೇಮಿಸುವ ಬದಲಾಗಿ ಶಾಲಾ ಮುಖ್ಯ ಶಿಕ್ಷಕರನ್ನೇ ಮುಂದುವರೆಸುವ ಬಗ್ಗೆ ದಿನಾಂಕ:05.07.2023ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಂಡಿಸಿದರು.

2. **ಶ್ರೀ ಕೆ. ಹರೀಶ್ ಕುಮಾರ್ ಅವರು** ಹವಾಮಾನ ಆಧಾರಿತ ಬೆಳೆ ವಿಮೆ ಗಡುವನ್ನು ಜುಲೈ ಅಂತ್ಯದವರೆಗೆ ವಿಸ್ತರಿಸುವ ಮೂಲಕ ಕೂಡಲೇ ಅರ್ಜಿಗಳನ್ನು ಆಹ್ವಾನಿಸಿ ಬೆಳೆಗಾರರಿಗೆ ಅನುಕೂಲ ಮಾಡಿಕೊಡುವ ಕುರಿತು ದಿನಾಂಕ:05.07.2023ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಂಡಿಸಿದರು.

3. **ಶ್ರೀಮತಿ ಹೇಮಲತಾ ನಾಯಕ್ ಅವರು** ರಾಜ್ಯದಲ್ಲಿ ಸಹಜ ಹೆರಿಗೆ ವಿಧಾನಗಳಿಗಿಂತ ಸಿಸೇರಿಯನ್ ಹೆರಿಗೆ ಹೆಚ್ಚಾಗುತ್ತಿರುವುದರಿಂದ ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುವುದರಿಂದ

ಸಹಜ ಹೆರಿಗೆಗೆ ಆದ್ಯತೆ ನೀಡುವ ಕುರಿತು ದಿನಾಂಕ: 06.07.2023ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಂಡಿಸಿದರು.

4. **ಡಾ: ತಳವಾರ್ ಸಾಬಣ್ಣ ಅವರು** ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕೆ–ಸೆಟ್ ಪರೀಕ್ಷೆಯನ್ನು ನಿಗದಿತ ಅವಧಿಯಲ್ಲಿ ನಡೆಸುವ ಕುರಿತು ದಿನಾಂಕ:06.07.2023ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಂಡಿಸಿದರು.

5. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) ಅವರು** ರಾಜ್ಯದ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಪ್ರತಿವರ್ಷ ಸಂಭವಿಸುವ ಭೂಕುಸಿತ/ಗುಡ್ಡ ಕುಸಿತದಂತಹ ಘಟನೆಗಳನ್ನು ಪರಿಶೀಲಿಸಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಕುರಿತು ದಿನಾಂಕ:06.07.2023ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಂಡಿಸಿದರು.

6. **ಶ್ರೀ ಪ್ರತಾಪ ಸಿಂಹ ನಾಯಕ್ ಕೆ., ಅವರು** ಅಂಗನವಾಡಿ ಕಾರ್ಯಕರ್ತರು ಬಳಸುತ್ತಿರುವ ಕಳಪೆ ಮೊಬೈಲ್‌ಗಳಿಂದ ಮಾತೃ ಪೂರ್ಣ ಯೋಜನೆಯ ಸಮೀಕ್ಷಾ ಕಾರ್ಯ ವಿಳಂಬವಾಗುತ್ತಿರುವ ಕುರಿತು ದಿನಾಂಕ:06.07.2023ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಂಡಿಸಿದರು.

## 6. ಚುನಾವಣಾ ಪ್ರಸ್ತಾವ

ಮಾನ್ಯ ಸಭಾನಾಯಕರು 2023–2024ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ/ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ

ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶನ ಮಾಡಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

**7. ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ**

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಅಧ್ಯಕ್ಷರು, ವಿಶೇಷ ಸದನ ಸಮಿತಿ ಅವರು "ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:22.04.2023ರಿಂದ 06 ತಿಂಗಳುಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವನೆಗೆ ಸದನದ ಸಹಮತಿ ಕೋರಿ ಪ್ರಸ್ತಾವವನ್ನು ಮಂಡಿಸಿದರು.

ಪ್ರಸ್ತಾವನೆಗೆ ಸದನದ ಸಹಮತಿಯನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಮಧ್ಯಾಹ್ನ 12.50 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿ (ಶ್ರೀ ಎಂ.ಕೆ. ಪ್ರಾಣೇಶ್) ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

**8. ನಿಯಮ 68ರ ಮೇರೆಗೆ ಚರ್ಚೆ**

ಶ್ರೀಯುತರುಗಳಾದ ಕೋಟ ಶ್ರೀನಿವಾಸ ಪೂಜಾರಿ, ಎಸ್.ವ್ಹಿ. ಸಂಕನೂರ ಹಾಗೂ ಪ್ರತಾಪ್ ಸಿಂಹ ನಾಯಕ್ ಕೆ., ಅವರುಗಳು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಶಾಂತಿದೂತ ಜೈನಮುನಿಯನ್ನು ದುಷ್ಕರ್ಮಿಗಳು ವಿದ್ಯುತ್ ಶಾಕ್ ನೀಡಿ, ತುಂಡು ತುಂಡಾಗಿ ಕತ್ತರಿಸಿ ಬಾವಿಗೆ ಹಾಕಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಗುರುತಿಸುವಲ್ಲಿ ಸರ್ಕಾರ ವಿಫಲಗೊಂಡಿರುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಕೋಟ ಶ್ರೀನಿವಾಸ ಪೂಜಾರಿ
2. ಪ್ರಕಾಶ್ ಬಾಬಣ್ಣ ಹುಕ್ಕೇರಿ
3. ಎನ್. ರವಿಕುಮಾರ್
4. ಡಾ: ವೈ.ಎ. ನಾರಾಯಣಸ್ವಾಮಿ
5. ಡಾ: ತೇಜಸ್ವಿನಿಗೌಡ
6. ನಸೀರ್ ಅಹ್ಮದ್
7. ಮರಿತಿಬ್ಬೇಗೌಡ
8. ನಿರಾಣಿ ಹಣಮಂತ್ ರುದ್ರಪ್ಪ
9. ಜಗದೀಶ್ ಶೆಟ್ಟರ್
10. ಶ್ರೀಮತಿ ಭಾರತಿ ಶೆಟ್ಟಿ
11. ಎಸ್.ಎಲ್. ಭೋಜೇಗೌಡ
12. ಛಲವಾದಿ ಟಿ. ನಾರಾಯಣಸ್ವಾಮಿ
13. ಶರವಣ ಟಿ.ಎ.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು ಹಾಗೂ ಹೆಚ್ಚಿನ ಉತ್ತರವನ್ನು ಮಾನ್ಯ ಗೃಹ ಸಚಿವರಿಂದ ಕೊಡಿಸುವುದಾಗಿ ತಿಳಿಸಿದರು.

ಮಧ್ಯಾಹ್ನ 2.15 ಗಂಟೆಯಲ್ಲಿ ಸದನವನ್ನು ಮುಂದೂಡಿ 3.30 ಗಂಟೆಗೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಪ್ರಕಟಿಸಿದರು.

ಮಧ್ಯಾಹ್ನ 3.45 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸದನವು ಸಭೆ ಸೇರಿತು.

**ನೂತನ ಸಚಿವರ ಪರಿಚಯ**

ಮಾನ್ಯ ಸಭಾನಾಯಕರು (ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಈ ಕೆಳಕಂಡ ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಿದರು.

ಶ್ರೀ ಶಿವರಾಜ ಎಸ್. ತಂಗಡಗಿ

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

**9. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ**

7. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

8. ಶ್ರೀ ಕೆ. ಅಬ್ದುಲ್ ಜಬ್ಬರ್

ಸಂಜೆ 4.32 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಸಭಾಪತಿಯವರ ಪೀಠದಲ್ಲಿ ಆಸೀನರಾದರು.

9. ಶ್ರೀ ಬಿ. ಎಂ. ಫಾರುಖ್

**10. ಗಮನ ಸೆಳೆಯುವ ಸೂಚನೆಗಳು**

01. **ಶ್ರೀ ಡಿ.ಎಸ್. ಅರುಣ್,** ಅವರು ಆನ್‌ಲೈನ್ ಡ್ರೀಮ್ 11, ಮೈ 11 ಸರ್ಕಲ್ ಹಾಗೂ ಇನ್ನಿತರೆ ಆ್ಯಪ್‌ಗಳಿಂದ ಆಗುತ್ತಿರುವ ಅನಾನುಕೂಲತೆಗಳು ಹಾಗೂ ಆನ್‌ಲೈನ್ ಮೂಲಕ ಸಾರ್ವಜನಿಕರಿಗೆ ಸಾಲ ನೀಡಿ ಮಾನಸಿಕ ಕಿರುಕುಳ ನೀಡುತ್ತಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆದರು.

ಮಾನ್ಯ ಗೃಹ ಸಚಿವರ ಪರವಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಡಿ.ಎಸ್. ಅರುಣ್

2. ಶ್ರೀಮತಿ ಭಾರತಿ ಶೆಟ್ಟಿ

ಮಾನ್ಯ ಗೃಹ ಸಚಿವರ ಪರವಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

02. **ಶ್ರೀ ತಿಪ್ಪಣ್ಣಪ್ಪ** ಅವರು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯಗಳ ಸಂಖ್ಯೆಯನ್ನು ಹೆಚ್ಚಿಸಿ ಸ್ವಂತ ಕಟ್ಟಡಗಳ ನಿರ್ಮಾಣ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸುವ ಬಗ್ಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಉತ್ತರಿಸಿದರು.

ಮಾನ್ಯ ಶ್ರೀ ತಿಪ್ಪಣ್ಣಪ್ಪ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಸ್ಪಷ್ಟೀಕರಣ ನೀಡಿದರು.

### 11. ನಿಯಮ 330ರ ಮೇರೆಗೆ

01. **ಶ್ರೀ ಮಂಜುನಾಥ್ ಭಂಡಾರಿ,** ಅವರು ಇತ್ತೀಚೆಗೆ ಕರ್ನಾಟಕದಲ್ಲಿ ಗರ್ಭಿಣಿ ಸ್ತ್ರೀಯರು ಪ್ರಸವ ಸಂದರ್ಭದಲ್ಲಿ ಅತಿ ಹೆಚ್ಚು ಮರಣ ಪ್ರಮಾಣ ದಾಖಲಾಗಿದ್ದು, ಮಹಿಳೆ ಹಾಗೂ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಇರುವ ಯೋಜನೆಗಳ ಅನುಷ್ಠಾನದಲ್ಲಿರುವ ತೊಡಕುಗಳು ಹಾಗೂ ಪ್ರಾದೇಶಿಕ ಭಿನ್ನತೆಗಳ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

ಶ್ರೀ ಮಂಜುನಾಥ್ ಭಂಡಾರಿ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

2. **ಶ್ರೀ ಮರಿತಿಬ್ಬೇಗೌಡ** ಅವರು ಸಮಾಜ ಕಲ್ಯಾಣ ಇಲಾಖೆಯಡಿ ಕ್ರೈಸ್ ವತಿಯಿಂದ ನಡೆಯುತ್ತಿರುವ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಶಿಕ್ಷಕರಿಗೆ ಡಿ.ಸಿ.ಆರ್.ಜಿ., ಕೆ.ಜಿ.ಐ.ಡಿ., ಜ್ಯೋತಿ ಸಂಜೀವಿನಿ, ಆರೋಗ್ಯ ಸೌಲಭ್ಯ ವಿಸ್ತರಣೆ ಹಾಗೂ ವಸತಿ ಶಾಲೆಗಳ ಉನ್ನತೀಕರಣ ಮಾಡದಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಪ್ರಸ್ತಾಪಿಸಿದರು.

ಸಂಜೆ 5.55 ಗಂಟೆಯಲ್ಲಿ ಮಾನ್ಯ ಸಭಾಪತಿಯವರ ಪೀಠದಲ್ಲಿ ಡಾ: ತೇಜಸ್ವಿನಿಗೌಡ ಅವರು ಆಸೀನರಾದರು.

ಈ ಕೆಳಕಂಡ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಮರಿತಿಬ್ಬೇಗೌಡ
2. ಡಾ: ವೈ.ಎ. ನಾರಾಯಸ್ವಾಮಿ
3. ಶ್ರೀ ಎಸ್.ಎಲ್. ಭೋಜೇಗೌಡ

ಮಾನ್ಯ ಸಮಾಜ ಕಲ್ಯಾಣ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಕೋಟ ಶ್ರೀನಿವಾಸ ಪೂಜಾರಿ
2. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
3. ಶ್ರೀ ಮರಿತಿಬ್ಬೇಗೌಡ

ಮಾನ್ಯ ಸಮಾಜ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

3. **ಶ್ರೀ ಮುನಿರಾಜುಗೌಡ ಪಿ.ಎಂ.** ಅವರು ಕೋಲಾರ ಗೃಹ ನಿರ್ಮಾಣ ಸಹಕಾರ ಸಂಘ ಮಾರಾಟಕ್ಕೆ ನಿಗದಿಪಡಿಸಿದ ಬೆಲೆಗಿಂತ ಕಡಿಮೆ

ಬೆಲೆಯಲ್ಲಿ ನಿವೇಶನವನ್ನು ನೋಂದಣಿ ಮಾಡಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿರುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಎಂ.ಎಲ್. ಅನಿಲ್ ಕುಮಾರ್
2. ಶ್ರೀ ಗೋವಿಂದರಾಜು

ಮಾನ್ಯ ಸಹಕಾರ ಸಚಿವರು ಉತ್ತರಿಸಿದರು.

ಶ್ರೀ ಮುನಿರಾಜುಗೌಡ ಪಿ.ಎಂ. ಅವರು ಸ್ಪಷ್ಟೀಕರಣ ಕೋರಿದರು

ಮಾನ್ಯ ಸಹಕಾರ ಸಚಿವರು ಸ್ಪಷ್ಟೀಕರಣ ನೀಡಿದರು.

ಸಂಜೆ 7.05 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:11.07.2023ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಡಾ: ತೇಜಸ್ವಿನಿಗೌಡ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಂಗಳವಾರ, ದಿನಾಂಕ:11.07.2023**

**(07)**

ಸದನವು ಬೆಳಗ್ಗೆ: 11.05 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

1. **ಪ್ರಶ್ನೋತ್ತರ**

ದಿನಾಂಕ:11.07.2023ರಂದು ಸದನದಲ್ಲಿ ಉತ್ತರಿಸುವ ಸಮೂಹ–IIರ 6ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 76(576) | |
| 2. | 77(613) | |
| 3. | 78(561) | |
| 4. | 79(609) | |
| 5. | 80(546) | ಗೈರುಹಾಜರಿ |
| 6. | 81(590) | |
| 7. | 82(615) | |
| 8. | 83(848) | |
| 9. | 84(560) | |
| 10. | 85(612) | ಗೈರು ಹಾಜರಿ |
| 11. | 86(586) | |

12. 87(603)

13. 88(570)

14. 89(540)

15. 90(595) ಕಾಲಾವಕಾಶ

ದಿನಾಂಕ:11.07.2023ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIರ 6ನೇ ಪಟ್ಟಿಯ ಒಟ್ಟು 84 ಪ್ರಶ್ನೆಗಳ ಪೈಕಿ 45 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

**2. ಶೂನ್ಯವೇಳೆ**

1. **ಶ್ರೀ ವೈ.ಎಂ. ಸತೀಶ್** ಅವರು ಬಳ್ಳಾರಿ ಜಿಲ್ಲೆಯ, ಜಿಲ್ಲಾಡಳಿತ ಭವನಕ್ಕೆ ಸರ್ಕಾರಿ ಕಛೇರಿಗಳನ್ನು ಸ್ಥಳಾಂತರ ಮಾಡುವ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಹಕಾರ ಸಚಿವರು ತಿಳಿಸಿದರು.

2. **ಶ್ರೀ ಮಂಜುನಾಥ್ ಭಂಡಾರಿ** ಅವರು ಸರ್ಕಾರಿ ಶಾಲೆಗಳ ಉನ್ನತಿಗಾಗಿ ಅಗತ್ಯ ಪ್ರಮಾಣದ ಶಿಕ್ಷಕರು, ಹೆಚ್ಚುವರಿ ಸಿಬ್ಬಂದಿ, ಸುಸಜ್ಜಿತ ಕಟ್ಟಡ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಹಕಾರ ಸಚಿವರು ತಿಳಿಸಿದರು.

3. **ಡಾ: ವೈ.ಎ. ನಾರಾಯಣಸ್ವಾಮಿ** ಅವರು ರಾಜ್ಯದಲ್ಲಿನ ಗ್ರೂಪ್ 'ಎ' ಮತ್ತು 'ಬಿ' ಸಮೂಹದ ವಿಕಲಚೇತನ ಅಧಿಕಾರಿ/ನೌಕರರುಗಳಿಗೆ ಬಡ್ತಿಯಲ್ಲಿ ಶೇ.4ರಷ್ಟು ಮೀಸಲಾತಿ ನೀಡುವ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಹಕಾರ ಸಚಿವರು ತಿಳಿಸಿದರು.

4. **ಶ್ರೀ ಮರಿತಿಬ್ಬೇಗೌಡ** ಅವರು ನ್ಯಾಯಾಲಯದ ತೀರ್ಪಿನಂತೆ ಶಾಲೆಗಳ ಮಾನ್ಯತೆ, ನವೀಕರಣ, ಮಾರ್ಗಸೂಚಿಗಳನ್ನು ಮಾರ್ಪಡಿಸುವ ಹಾಗೂ ಮಾನ್ಯತೆ ನವೀಕರಿಸುವ ಅವಧಿಯನ್ನು ಹೆಚ್ಚಿಸುವ ಬಗ್ಗೆ ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಹಕಾರ ಸಚಿವರು ತಿಳಿಸಿದರು.

5. **ಶ್ರೀ ಕೆ. ಹರೀಶ್ ಕುಮಾರ್** ಅವರು ರಸ್ತೆ ಅಪಘಾತಗಳನ್ನು ತಡೆಯಲು ಜಾಗೃತಿ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ನಿಯಮ ಮೀರಿ ವಾಹನ ಚಾಲನೆ ಮಾಡುವವರ ಡ್ರೈವಿಂಗ್ ಲೈಸೆನ್ಸ್ ರದ್ದುಗೊಳಿಸುವ ಬಗ್ಗೆ ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಹಕಾರ ಸಚಿವರು ತಿಳಿಸಿದರು.

6. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** ಅವರು ಕಾಡಾನೆ ಹಾವಳಿಯನ್ನು ತಡೆಗಟ್ಟಲು ನಿಯೋಜನೆಗೊಂಡಿರುವ ಕಾರ್ಯಪಡೆಯ ಸಿಬ್ಬಂದಿ ಸಾಮರ್ಥ್ಯವನ್ನು ಹೆಚ್ಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಉತ್ತರ ಕೊಡುವುದಾಗಿ ತಿಳಿಸಿದರು.

7. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಕುಡಚಿ–ಬಾಗಲಕೋಟೆ ರೈಲು ಮಾರ್ಗದ ತ್ವರಿತ ಕಾಮಗಾರಿ ಅನುಷ್ಠಾನದ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಉತ್ತರ ಕೊಡುವುದಾಗಿ ತಿಳಿಸಿದರು.

8. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಹೊಸ ರೇಷನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಕೂಡಲೇ ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಉತ್ತರಿಸಿದರು.

**9. ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಮೈಸೂರು ಜಿಲ್ಲೆಯ ಟಿ. ನರಸೀಪುರ ಯುವ ಬ್ರಿಗೇಡ್ ಕಾರ್ಯಕರ್ತನ ಹತ್ಯೆ ಕುರಿತು ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಹಕಾರ ಸಚಿವರು ತಿಳಿಸಿದರು.

### 3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಹಕಾರ ಸಚಿವರು ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಮಾರ್ಚ್, 2022ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಯನ್ನು (2023ನೇ ವರ್ಷದ ವರದಿ ಸಂಖ್ಯೆ–2) ಸಭೆಯ ಮುಂದೆ ಮಂಡಿಸಿದರು.

### 4. ವರದಿಯನ್ನೊಪ್ಪಿಸುವುದು

ಅ. **ಶ್ರೀ ಹೆಚ್.ಎಸ್. ಗೋಪಿನಾಥ್, ಸದಸ್ಯರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶೇಷ ಸದನ ಸಮಿತಿ** ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವುದನ್ನು ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ವರದಿಯನ್ನೊಪ್ಪಿಸಿದರು.

ಆ. **ಶ್ರೀ ಪಿ.ಹೆಚ್. ಪೂಜಾರ್, ಅಧ್ಯಕ್ಷರು, ಹಕ್ಕುಬಾಧ್ಯತಾ ಸಮಿತಿ** ಅವರು 2021–22ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 100ನೇ ವರದಿಯನ್ನೊಪ್ಪಿಸಿದರು.

**5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ**

10. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ

ಮಧ್ಯಾಹ್ನ 12.35 ಗಂಟೆಗೆ ಮಾನ್ಯ ಸಭಾಪತಿಯವರ ಪೀಠದಲ್ಲಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಆಸೀನರಾದರು.

11. ಶ್ರೀ ಪ್ರಕಾಶ್ ಕೆ. ರಾಥೋಡ್

12. ಶ್ರೀ ಕೆ.ಎ. ತಿಪ್ಪೇಸ್ವಾಮಿ

ಮಧ್ಯಾಹ್ನ 2.00 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಪ್ರಕಟಿಸಿದರು.

ಮಧ್ಯಾಹ್ನ 3.40 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ**

13. ಡಾ: ವೈ.ಎ. ನಾರಾಯಣಸ್ವಾಮಿ

14. ಶ್ರೀ ತಿಪ್ಪಣ್ಣಪ್ಪ

15. ಶ್ರೀ ಆ. ದೇವೇಗೌಡ

**6. ಗಮನ ಸೆಳೆಯುವ ಸೂಚನೆ**

1. **ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ** ಅವರು ವಿಶ್ವಕರ್ಮ ಸಮಾಜದವರಿಗೆ ದೇವಸ್ಥಾನಗಳ ಆಡಳಿತ ಮಂಡಳಿಯಲ್ಲಿ ಅವಕಾಶ ಮಾಡಿಕೊಡುವ ಕುರಿತು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆದರು.

   ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಉತ್ತರಿಸಿದರು.

ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಸ್ಪಷ್ಟೀಕರಣ ನೀಡಿದರು.

2. **ಶ್ರೀ ಮಧು ಜಿ. ಮಾದೇಗೌಡ** ಅವರು ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ.ಸೆಟ್) ಕಳೆದ 02 ವರ್ಷಗಳಿಂದ ನಡೆಸದಿರುವ ಕಾರಣ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು.

ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಸ್ಪಷ್ಟೀಕರಣ ನೀಡಿದರು.

## ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

16. ಶ್ರೀ ಅರವಿಂದ ಕುಮಾರ್ ಅರಳಿ

ಸಂಜೆ 5.15 ಗಂಟೆಯಲ್ಲಿ ಡಾ: ತೇಜಸ್ವಿನಿಗೌಡ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

## ಗಮನ ಸೆಳೆಯುವ ಸೂಚನೆ

3. **ಶ್ರೀ ನಿರಾಣಿ ಹಣಮಂತ ರುದ್ರಪ್ಪ** ಅವರು ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ನಿರ್ಮಾಣವಾದ ಆಲಮಟ್ಟಿ ಜಲಾಶಯ ಹಿನ್ನೀರಿನಿಂದ ಭೂಮಿಯನ್ನು ಕಳೆದುಕೊಂಡ ಸಂತ್ರಸ್ಥರಿಗೆ ಭೂಪರಿಹಾರ ಧನವನ್ನು ಮಂಜೂರು ಮಾಡದಿರುವುದರಿಂದ ಹಾಗೂ ಪುನರ್ ವಸತಿ, ಪುನರ್ ನಿರ್ಮಾಣ ಕೇಂದ್ರಗಳಲ್ಲಿ ಮಂಜೂರಾದ ಕಾಮಗಾರಿಗಳನ್ನು ಪ್ರಾರಂಭಿಸದಿರುವುದರಿಂದ ಸಂತ್ರಸ್ಥರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆದರು.

ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರಿಸಿದರು.

ಈ ಕೆಳಕಂಡ ಸದಸ್ಯರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ನಿರಾಣಿ ಹಣಮಂತ ರುದ್ರಪ್ಪ

ಸಂಜೆ 5.45 ಗಂಟೆಗೆ ಮಾನ್ಯ ಸಭಾಪತಿಯವರು (ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪೀಠದಲ್ಲಿ ಆಸೀನರಾದರು.

2. ಶ್ರೀ ಪಿ.ಹೆಚ್. ಪೂಜಾರ್

ಮಾನ್ಯ ಉಪ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ನೀಡಿದರು.

4. **ಶ್ರೀ ಮರಿತಿಬ್ಬೇಗೌಡ** ಅವರು ದೈಹಿಕ ಶಿಕ್ಷಣ ಪರಿವೀಕ್ಷಕರ ಗ್ರೂಪ್ **"ಬಿ"** ಹುದ್ದೆಯಿಂದ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳ ಹುದ್ದೆಗೆ ಒಂದು ಬಾರಿಗೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವಿನಾಯಿತಿ ನೀಡಿ, ಮುಂಬಡ್ತಿ ನೀಡುವ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರ ಗಮನ ಸೆಳೆದರು.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಮರಿತಿಬ್ಬೇಗೌಡ

2. ಶ್ರೀ ಶಶೀಲ್ ಜಿ. ನಮೋಶಿ

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು ಸ್ಪಷ್ಟೀಕರಣ ನೀಡಿದರು.

**7. ನಿಯಮ 330ರ ಮೇರೆಗೆ**

**1. ಶ್ರೀ ಕೆ.ಎ. ತಿಪ್ಪೇಸ್ವಾಮಿ ಹಾಗೂ ಶ್ರೀ ಎಸ್.ಎಲ್. ಭೋಜೇಗೌಡ** ಅವರುಗಳು ನಂದಿನಿ ಹಾಲು ಉತ್ಪಾದಕ ಸಂಸ್ಥೆಯ ವಿರುದ್ಧ

ಗುಜರಾತ್ ಅಮೂಲ್ ಸಂಸ್ಥೆ ಷಡ್ಯಂತರ ಹೂಡಿ ನಂದಿನಿ ಬ್ರಾಂಡ್‌ಗೆ ಮತ್ತು ಸಂಸ್ಥೆಗೆ ಧಕ್ಕೆ ತರುತ್ತಿರುವ ಮತ್ತು ರಾಜ್ಯದ ಗೋಶಾಲೆಗಳಲ್ಲಿ ಮೇವಿನ ಕೊರತೆ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣ ಕೋರಿದರು.

1. ಡಾ: ವೈ.ಎ. ನಾರಾಯಣಸ್ವಾಮಿ
2. ಶ್ರೀ ಮರಿತಿಬ್ಬೇಗೌಡ
3. ಶ್ರೀ ಎಂ. ನಾಗರಾಜು
4. ಶ್ರೀ ಎಸ್.ಎಲ್. ಭೋಜೇಗೌಡ
5. ಡಾ: ತೇಜಸ್ವಿನಿಗೌಡ
6. ಶ್ರೀ ನಿರಾಣಿ ಹಣಮಂತ ರುದ್ರಪ್ಪ

ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಸ್ಪಷ್ಟೀಕರಣ ನೀಡಿದರು.

**8. ನಿಯಮ 68ರ ಮೇರೆಗೆ ಚರ್ಚೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನಲ್ಲಿ ಶಾಂತಿದೂತ ಜೈನಮುನಿ ಕಾಮಕುಮಾರ ನಂದಿ ಅವರನ್ನು ದುಷ್ಕರ್ಮಿಗಳು ವಿದ್ಯುತ್ ಶಾಕ್ ನೀಡಿ, ಹತ್ಯೆ ಮಾಡಿ ನಂತರ ತುಂಡು ತುಂಡಾಗಿ ಕತ್ತರಿಸಿ ಕೊಳವೆ ಬಾವಿಗೆ ಹಾಕಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಗುರುತಿಸುವಲ್ಲಿ ಸರ್ಕಾರ ವಿಫಲವಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಕೋಟ ಶ್ರೀನಿವಾಸ ಪೂಜಾರಿ
2. ಡಾ: ವೈ.ಎ. ನಾರಾಯಣಸ್ವಾಮಿ
3. ಡಾ: ತೇಜಸ್ವಿನಿಗೌಡ
4. ಶ್ರೀ ಕೆ.ಎಸ್. ನವೀನ್
5. ಶ್ರೀ ಕೇಶವ ಪ್ರಸಾದ್ ಎಸ್
6. ಶ್ರೀ ಮರಿತಿಬ್ಬೇಗೌಡ
7. ಶ್ರೀ ಎನ್. ರವಿಕುಮಾರ್

ಮಾನ್ಯ ಗೃಹ ಸಚಿವರು ಸ್ಪಷ್ಟೀಕರಣ ನೀಡಿದರು.

ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು (ಭಾರತೀಯ ಜನತಾ ಪಕ್ಷ) ಸಿ.ಬಿ.ಐ ತನಿಖೆಗೆ ವಹಿಸುವಂತೆ ಕೋರಿ ಸದನದ ಬಾವಿಗೆ ಬಂದು ಧರಣಿ ನಿರತರಾದರು.

ಸಂಜೆ. 7.25 ಗಂಟೆಯಲ್ಲಿ ಸದನವನ್ನು ಮುಂದೂಡಿ ದಿನಾಂಕ:12.07.2023ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಬುಧವಾರ, ದಿನಾಂಕ:12.07.2023**

**(08)**

ಸದನವು ಬೆಳಗ್ಗೆ: 11.50 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:12.07.2023ರಂದು ಸದನದಲ್ಲಿ ಉತ್ತರಿಸುವ ಸಮೂಹ–IIIರ 7ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 91(719) | |
| 2. | 92(713) | |
| 3. | 93(718) | |
| 4. | 94(626) | |
| 5. | 95(727) | |
| 6. | 96(754) | ಕಾಲಾವಕಾಶ |
| 7. | 97(711) | |
| 8. | 98(694) | |
| 9. | 99(728) | |
| 10. | 100(679) | ವರ್ಗಾವಣೆ |
| 11. | 101(651) | |

12. 102(723) ವರ್ಗಾವಣೆ

13. 103(699)

14. 104(686)

15. 105(729)

ದಿನಾಂಕ:12.07.2023ರ ಲಿಖಿತ ಮೂಲಕ ಉತ್ತರಿಸುವ ಸಮೂಹ–IIIರ 7ನೇ ಪಟ್ಟಿಯ ಒಟ್ಟು 90 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

**2. ಶೂನ್ಯವೇಳೆ**

1. **ಡಾ: ವೈ.ಎ. ನಾರಾಯಣಸ್ವಾಮಿ** ಅವರು ತುಳಸಿವನದ ನಾಗರಕಟ್ಟೆ ಪೂಜಾ ಸಮಾರಂಭಕ್ಕೆ ಉಪ್ಪಾರಪೇಟೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರು ನೋಟೀಸ್ ನೀಡಿ, ಪೂಜಾ ಕಾರ್ಯಕ್ಕೆ ಅಡ್ಡಿ ಉಂಟು ಮಾಡಿರುವ ಕುರಿತು ಪ್ರಸ್ತಾಪಿಸಿದರು.

**“ ಗದ್ದಲ”**

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**“ ಧರಣಿ”**

**“ ಗದ್ದಲ”**

ಸದನವನ್ನು ಮಧ್ಯಾಹ್ನ 1.20ರಲ್ಲಿ 10 ನಿಮಿಷಗಳ ಕಾಲ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸದನವು 1.45 ಗಂಟೆಯಲ್ಲಿ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಇಂದು ಸಂಜೆ ಸದನ ಮುಗಿಯುವುದರೊಳಗೆ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

ಧರಣಿ ನಿರತ ವಿರೋಧ ಪಕ್ಷದ (ಭಾರತೀಯ ಜನತಾ ಪಕ್ಷ) ಮಾನ್ಯ ಶಾಸಕರುಗಳು ತಮ್ಮ ಸ್ಥಾನಗಳಿಗೆ ತೆರಳಿದರು.

2. **ಶ್ರೀ ಶರವಣ ಟಿ.ಎ.** ಅವರು ಬಿಡಿಎ ನಿಂದ ಕೆಂಪೇಗೌಡ ಬಡಾವಣೆಯಲ್ಲಿ ಹಂಚಿಕೆ ಮಾಡಲಾಗಿರುವ ನಿವೇಶನಗಳ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ನಿರಾಣಿ ಹಣಮಂತ ರುದ್ರಪ್ಪ** ಅವರು ಹಂಪಿ ಕನ್ನಡ ವಿಶ್ವ ವಿದ್ಯಾಲಯದ ವಿದ್ಯುತ್ ಬಿಲ್ ಮನ್ನಾ ಮಾಡುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಗೋವಿಂದರಾಜು** ಅವರು ಮಾಸ್ತಿ ಪೆರಿಯಾತ್ ಗ್ರಂಥಾಲಯ ಹಾಗೂ ಸ್ಮಾರಕ ಭವನಕ್ಕೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೃಷಿ ಡಿಪ್ಲೋಮೋ ಕೋರ್ಸ್ ಪ್ರಾರಂಭಿಸಿ, ಸದರಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲು ಅನುದಾನ ಮಂಜೂರು ಮಾಡುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಶಶೀಲ್ ಜಿ. ನಮೋಶಿ** ಅವರು ಶ್ರೀ ನಾರಾಯಣ ಗುರು ವಸತಿ ಶಾಲೆಗಳಿಗೆ ತ್ವರಿತವಾಗಿ ಶಾಶ್ವತ ಕಟ್ಟಡ ಹಾಗೂ ಸಿಬ್ಬಂದಿ ವ್ಯವಸ್ಥೆಯನ್ನು ಮಾಡುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀಮತಿ ಹೇಮಲತಾ ನಾಯಕ** ಅವರು ಗದಗ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಆದ್ಯತೆ ಮೇರೆಗೆ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** ಅವರು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕೆ. ನಿಡುಗಣಿ ಸರ್ವೆ ನಂ.22/1ರಲ್ಲಿನ ಗೋಮಾಳ ಜಾಗವನ್ನು ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

9. **ಶ್ರೀ ಹೆಚ್.ಎಸ್. ಗೋಪಿನಾಥ್** ಅವರು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಆರ್.ಟಿ.ಓ ಕಛೇರಿಗಳಲ್ಲಿ ಅಕ್ರಮವಾಗಿ ವಾಹನ ನೋಂದಣಿ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಾರಿಗೆ ಸಚಿವರು ಉತ್ತರಿಸಿದರು.

10. **ಶ್ರೀ ಪ್ರಕಾಶ್ ಕೆ. ರಾಥೋಡ್** ಅವರು ಜುಲೈ 13ನ್ನು **"**ವಿಧಾನಸೌಧದ ಸಂಸ್ಥಾಪನಾ ದಿನ**"** ಎಂದು ಘೋಷಿಸುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**3. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ**

1. **ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು** ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜನರಿಗೆ ಶುದ್ಧವಾದ ಕುಡಿಯುವ ನೀರು ಪೂರೈಕೆಯಾಗದೇ ಕಲುಷಿತ ನೀರು ಸೇವನೆಯಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದು, ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಎಚ್ಚರಿಕೆ ನೀಡುವ ಕುರಿತು ದಿನಾಂಕ:05.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

2. **ಶ್ರೀ ಎಂ. ನಾಗರಾಜು ಅವರು** ಕೂಡ್ಲಗಿ ತಾಲ್ಲೂಕು ಬಡೇಲಡಕು ಗ್ರಾಮ ಪಂಚಾಯತಿ ವ್ಯಾಪ್ತಿಯ ದೊಡ್ಡ ಗೊಲ್ಲರಹಟ್ಟಿ ಗ್ರಾಮದಲ್ಲಿ ಜಲಜೀವನ್ ಮಿಷನ್ ಕಾಮಗಾರಿ ಯೋಜನೆಯಡಿ ಅವೈಜ್ಞಾನಿಕ ಕಾಮಗಾರಿ ನಡೆಸಿದ್ದು, ಕಲುಷಿತ ನೀರನ್ನು ಸೇವಿಸಿ ಗ್ರಾಮದ 13 ಜನರು ಅಸ್ವಸ್ಥಗೊಂಡಿದ್ದು, ಆವೈಜ್ಞಾನಿಕ ಕಾಮಗಾರಿ ಕೈಗೊಂಡಿರುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ದಿನಾಂಕ:05.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

3. **ಶ್ರೀ ತಿಪ್ಪಣ್ಣಪ್ಪ ಅವರು** ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಕಾನೂನು ಬಾಹಿರವಾಗಿ ಮಾದಕ ವಸ್ತುಗಳು ಮಾರಾಟವಾಗುತ್ತಿರುವುದನ್ನು ನಿಯಂತ್ರಿಸಲು ವಿಶೇಷ ಕಾರ್ಯಪಡೆಯನ್ನು ನೇಮಿಸುವ ಬಗ್ಗೆ ದಿನಾಂಕ:06.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

4. **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ ಅವರು** ಅರಣ್ಯ ಬೆಳೆಸುವ ಕಾರ್ಯದಲ್ಲಿ ವಿಷಪೂರಿತ ಕೀಟನಾಶಕಗಳನ್ನು ಉಪಯೋಗಿಸಿ ಜೀವ

ವೈವಿಧ್ಯಗಳಿಗೆ ಹಾನಿ ಉಂಟಾಗುತ್ತಿರುವ ಬಗ್ಗೆ ದಿನಾಂಕ: 10.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

5. **ಶ್ರೀ ಶರವಣ ಟಿ.ಎ ಅವರು** ರೈತರ ಬೆಳೆ ವಿಮೆ ನೀಡುವಲ್ಲಿ ಸರ್ಕಾರ ಅಥವಾ ಎಲ್.ಐ.ಸಿ. ವಿಮಾ ಕಂಪನಿಗೆ ಅನುಷ್ಠಾನದ ಹೊಣೆ ನೀಡುವ ಕುರಿತು ದಿನಾಂಕ:10.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

6. **ಶ್ರೀ ಡಿ.ಎಸ್. ಅರುಣ್ ಅವರು** ಕುವೆಂಪು ವಿಶ್ವವಿದ್ಯಾನಿಲಯದ ಹಗರಣಗಳ ಕುರಿತು ದಿನಾಂಕ:10.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

7. **ಶ್ರೀ ಮಂಜುನಾಥ್ ಭಂಡಾರಿ ಅವರು** ಬಿಸಿಯೂಟ ಸಿಬ್ಬಂದಿಗಳ ವೇತನವನ್ನು ಹೆಚ್ಚಿಸುವ ಕುರಿತು ದಿನಾಂಕ:10.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

8. **ಶ್ರೀ ಶಶಿಲ್ ಜಿ. ನಮೋಶಿ ಅವರು** ರಾಜ್ಯದ ಅದರಲ್ಲೂ ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆ ಕುರಿತು ದಿನಾಂಕ:10.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

9. **ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು** ಗ್ರಾಮ ಪಂಚಾಯಿತಿ ಸದಸ್ಯರ ಆಸ್ತಿ ವಿವರ ಸಲ್ಲಿಸುವ ವ್ಯವಸ್ಥೆಯನ್ನು ರದ್ದುಗೊಳಿಸುವ ಕುರಿತು ದಿನಾಂಕ:10.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ

ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

10. **ಡಾ: ವೈ.ಎ. ನಾರಾಯಣಸ್ವಾಮಿ ಅವರು** ಸರ್ಕಾರಿ ಶಾಲಾ ಮಕ್ಕಳು ಸಮವಸ್ತ್ರ ಹೊಲಿಸಿಕೊಳ್ಳುವ ವೆಚ್ಚವನ್ನು ಶಿಕ್ಷಣ ಇಲಾಖೆ ವತಿಯಿಂದ ಭರಿಸುವ ಕುರಿತು ದಿನಾಂಕ:10.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

11. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) ಅವರು** ಕಾಡಾನೆ ಹಾವಳಿಯನ್ನು ತಡೆಗಟ್ಟಲು ನಿಯೋಜನೆಗೊಂಡಿರುವ ಕಾರ್ಯಪಡೆಯ ಸಿಬ್ಬಂದಿ ಸಾಮರ್ಥ್ಯವನ್ನು ಹೆಚ್ಚಿಸುವ ಕುರಿತು ದಿನಾಂಕ:11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

12. **ಶ್ರೀ ಕೇಶವ ಪ್ರಸಾದ್ ಎಸ್ ಅವರು** ಹೊಸ ರೇಷನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಕೂಡಲೇ ಕ್ರಮ ಕೈಗೊಳ್ಳುವ ಕುರಿತು ದಿನಾಂಕ: 11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

ಮಧ್ಯಾಹ್ನ 2.10 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

ಮಧ್ಯಾಹ್ನ 3.30 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**4. ನಿಲುವಳಿ ಸೂಚನೆ**

ಶ್ರೀಯುತರುಗಳಾದ ಕೆ.ಎ. ತಿಪ್ಪೇಸ್ವಾಮಿ, ಎಸ್.ಎಲ್. ಭೋಜೇಗೌಡ, ಗೋವಿಂದರಾಜು ಹಾಗೂ ಇತರರು ಮಹದಾಯಿ, ಮೇಕೆದಾಟು ಮತ್ತು ಭದ್ರಾ

ಮೇಲ್ದಂಡೆ ನೀರಾವರಿ ಯೋಜನೆಗಳಿಗೆ ಅಗತ್ಯವಿರುವ ಅನುದಾನವನ್ನು ಆಯವ್ಯಯದಲ್ಲಿ ಒದಗಿಸದೇ ಇರುವುದರಿಂದ ನೀರಾವರಿ ಯೋಜನೆಗಳ ಅನುಷ್ಠಾನ ನೆನೆಗುದಿಗೆ ಬಿದ್ದಿರುವ ಕಾರಣದಿಂದ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರನ್ನು ನಿಗಧಿತ ಅವಧಿಯಲ್ಲಿ ಬಳಸಿಕೊಳ್ಳಲಾಗದೆ ರಾಜ್ಯದ ಜನತೆಗೆ ಅಪಾರ ನಷ್ಟ ಉಂಟಾಗಿರುವ ಕುರಿತು ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಮಾನ್ಯ ಸಭಾಪತಿಯವರಲ್ಲಿ ಅನುಮತಿ ಕೋರಿದರು.

59ರಡಿಯ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿರುವುದಾಗಿ ಮಾನ್ಯ ಸಭಾಪತಿಯವರು (ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಶೂನ್ಯವೇಳೆ**

1. **ಡಾ: ವೈ.ಎ. ನಾರಾಯಣಸ್ವಾಮಿ ಅವರು** ತುಳಸಿವನದ ನಾಗರಕಟ್ಟೆ ಪೂಜಾ ಸಮಾರಂಭಕ್ಕೆ ಉಪ್ಪಾರ ಪೇಟೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರು ನೋಟೀಸ್ ನೀಡಿ, ಪೂಜಾ ಕಾರ್ಯಕ್ಕೆ ಅಡ್ಡಿ ಉಂಟು ಮಾಡಿರುವ ಬಗ್ಗೆ ಪ್ರಸ್ತಾಪಿದ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಗೃಹ ಸಚಿವರು ಉತ್ತರಿಸಿದರು.

**5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದ ಉತ್ತರ**

**ಮುಂದುವರೆದ ಚರ್ಚೆ**

17. ಶ್ರೀ ಸಲೀಂ ಅಹಮದ್

18. ಶ್ರೀ ಕೇಶವ ಪ್ರಸಾದ್ ಎಸ್

19. ಶ್ರೀ ಗೋವಿಂದರಾಜು

ಸಂಜೆ 4.30 ಗಂಟೆಯಲ್ಲಿ ಡಾ: ತೇಜಸ್ವಿನಿಗೌಡ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

20. ಡಿ.ಎಸ್. ಅರುಣ್

## 6. ಗಮನ ಸೆಳೆಯುವ ಸೂಚನೆಗಳು

1. **ಡಾ: ವೈ.ಎ. ನಾರಾಯಣಸ್ವಾಮಿ** ಅವರು ರಾಜ್ಯದ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡದಿರುವುದರಿಂದ ಗುಣಾತ್ಮಕ ಶಿಕ್ಷಣಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರ ಗಮನ ಸೆಳೆದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಡಾ: ವೈ.ಎ. ನಾರಾಯಣಸ್ವಾಮಿ
2. ಶ್ರೀ ಶಶೀಲ್ ಜಿ. ನಮೋಶಿ
3. ಶ್ರೀ ಎಸ್.ವ್ಹಿ. ಸಂಕನೂರ
4. ಶ್ರೀ ಚಿದಾನಂದ ಎಂ. ಗೌಡ

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರು ಸ್ಪಷ್ಟೀಕರಣ ನೀಡಿದರು.

2. **ಶ್ರೀ ಗೋವಿಂದರಾಜು** ಅವರು ರಾಜ್ಯ ಸರ್ಕಾರಕ್ಕೆ ಮೂರು ವರ್ಷಗಳ ಹಿಂದೆ ಕೋಟ್ಯಾಂತರ ರೂ. ಆದಾಯ ತಂದು ಕೊಡುತ್ತಿದ್ದ ಎಪಿಎಂಸಿಗಳು ಪ್ರಸ್ತುತ ವಿದ್ಯುತ್ ಮತ್ತು ನೀರಿನ ಶುಲ್ಕಗಳನ್ನು ಪಾವತಿಸಲಾಗದೆ ಮುಚ್ಚುವ ಸ್ಥಿತಿ ತಲುಪಿರುವ ಕುರಿತು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಗಮನ ಸೆಳೆದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಉತ್ತರಿಸಿದರು.

ಶ್ರೀ ಗೋವಿಂದರಾಜು, ಮಾನ್ಯ ಶಾಸಕರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸ್ಪಷ್ಟೀಕರಣ ನೀಡಿದರು.

**7. ನಿಯಮ 330ರ ಮೇರೆಗೆ**

1. **ಡಾ: ಡಿ. ತಿಮ್ಮಯ್ಯ,** ಅವರು ಮೈಸೂರು ನಗರದ ಕೆಂಚಲಗೂಡು ಬಡಾವಣೆಯಲ್ಲಿ ವಿವೇಚನಾ ಕೋಟಾದಲ್ಲಿ ಲಭ್ಯವಿರುವ ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಉತ್ತರಿಸಿದರು.

2. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಬಿ.ಎಸ್.ಸಿ ನರ್ಸಿಂಗ್ ಕೋರ್ಸ್‌ಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿಇಟಿ ಪರೀಕ್ಷೆಯ ಮೂಲಕ ಸೀಟನ್ನು ಹಂಚಿಕೆ ಮಾಡುವ ಸಂಬಂಧ ದಿನಾಂಕ:18.04.2023 ರಂದು ಸರ್ಕಾರವು ಪ್ರಕಟಣೆ ಹೊರಡಿಸಿರುವುದರಿಂದ ಪಿ.ಯು. ವಿಜ್ಞಾನ ವಿದ್ಯಾರ್ಥಿಗಳಿಗೆ ಪೂರ್ವ ಸಿದ್ದತೆ ಮಾಡಿಕೊಳ್ಳಲು ಸರಿಯಾದ ಕಾಲಾವಕಾಶ ಸಿಗದೇ ಇರುವುದರಿಂದ 2022–23ನೇ ಶೈಕ್ಷಣಿಕ ವರ್ಷದಲ್ಲಿ ಅನುಸರಿಸಿದ ನಿಯಮಾವಳಿಗಳನ್ನು ಪಾಲಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಉತ್ತರಿಸಿದರು.

   ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

   1. ಶ್ರೀ ಎಸ್.ವ್ಹಿ. ಸಂಕನೂರ

   2. ಶ್ರೀ ಎಸ್.ಎಲ್. ಭೋಜೇಗೌಡ

   2. ಶ್ರೀ ಎನ್. ರವಿಕುಮಾರ್

ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಸ್ಪಷ್ಟೀಕರಣ ನೀಡಿದರು.

ಸಂಜೆ. 6.40 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:13.07.2023ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರ ಪೀಠದಲ್ಲಿ ಡಾ: ತೇಜಸ್ವಿನಿಗೌಡ ಅವರು ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಗುರುವಾರ, ದಿನಾಂಕ:13.07.2023**

**(9)**

ಸದನವು ಬೆಳಗ್ಗೆ: 11.10 ಗಂಟೆಗೆ ಮಾನ್ಯ ಉಪ ಸಭಾಪತಿಯವರ **(ಶ್ರೀ ಎಂ.ಕೆ. ಪ್ರಾಣೇಶ್)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಶ್ರೀ ಎಚ್.ಕೆ. ಪಾಟೀಲ್, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ದಿನಾಂಕ:13.07.2023ರಂದು ವಿಧಾನಸೌಧಕ್ಕೆ ಅಡಿಗಲ್ಲು ಹಾಕಿದ ದಿನವನ್ನಾಗಿ ಆಚರಿಸುತ್ತಿರುವ ಕುರಿತು ಪ್ರಸ್ತಾಪಿಸುತ್ತಾ, ದಿವಂಗತ ಶ್ರೀ ಕೆ.ಸಿ. ರೆಡ್ಡಿಯವರು ವಿಧಾನಸೌಧ ಕಟ್ಟಡಕ್ಕೆ 50 ವರ್ಷಗಳ ಹಿಂದೆ ಹಾಕಿದ್ದ ಅಡಿಗಲ್ಲು, ಅವರ ಅದ್ಭುತ ಕಲ್ಪನೆ, ಪ್ರಯತ್ನ ಹಾಗೂ ದಿವಂಗತ ಕೆಂಗಲ್ ಹನುಮಂತಯ್ಯನವರ ಪರಿಶ್ರಮ ಮತ್ತು ದೂರದೃಷ್ಟಿಯಿಂದ ಈ ದೇಶದಲ್ಲಿಯೇ ಅತ್ಯಂತ ಸುಂದರವಾಗಿ ನಿರ್ಮಾಣವಾಗಿರುವಂತಹ ವಿಧಾನಸೌಧ ಕಟ್ಟಡವನ್ನು ನೆನಪು ಮಾಡಿಕೊಳ್ಳುತ್ತಾ, ಈ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ಅಭಿನಂದನೆಯನ್ನು ಸಲ್ಲಿಸಿದರು.

## 1. ಪ್ರಶ್ನೋತ್ತರ

ದಿನಾಂಕ:13.07.2023ರಂದು ಸದನದಲ್ಲಿ ಉತ್ತರಿಸುವ ಸಮೂಹ–IVರ 8ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 106 (782)
2. 107 (828)

3. 108 (832)

4. 109 (773)

5. 110 (816)

6. 111 (819)

7. 112 (778)

8. 113 (764)

9. 114 (826)

10. 115 (738)

11. 116 (732)

12. 117 (761) ಶ್ರೀ ಎಸ್. ರವಿ ಪರವಾಗಿ ಶೀ ಯು.ಬಿ. ವೆಂಕಟೇಶ್

13. 118 (748+817)

14. 119 (840)

**2. ನೂತನ ಸಚಿವರ ಪರಿಚಯ**

ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಶ್ರೀ ಡಿ. ಸುಧಾಕರ್, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರನ್ನು ಸದನಕ್ಕೆ ಪರಿಚಯಿಸಿದರು.

**ಪ್ರಶ್ನೋತ್ತರ**

15. 120 (820)

ದಿನಾಂಕ:13.07.2023ರ ಲಿಖಿತ ಮೂಲಕ ಉತ್ತರಿಸುವ ಸಮೂಹ IVರ 8ನೇ ಪಟ್ಟಿಯ ಒಟ್ಟು 101 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 3. ಶೂನ್ಯವೇಳೆ

1. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** ಅವರು ಹಾರಂಗಿ ಅಣೆಕಟ್ಟು ಯೋಜನಾ ವ್ಯಾಪ್ತಿಗೆ ಸೇರಿದ ನೂರಾರು ಸಂಖ್ಯೆಯ ಕಟ್ಟಡಗಳು, ವಸತಿ ಗೃಹಗಳು ಸಮಗ್ರ ನಿರ್ವಹಣೆ ಕೊರತೆ ಎದುರಿಸುತ್ತಿದ್ದು, ಇದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟದ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಶಶೀಲ್ ಜಿ. ನಮೋಶಿ** ಅವರು ವಿವಿಧ ಇಲಾಖೆಯಲ್ಲಿ ಖಾಲಿ ಇರುವ 500ಕ್ಕೂ ಹೆಚ್ಚು ಗೆಜೆಟೆಡ್ ಪ್ರೋಬೆಷನರಿ ಹುದ್ದೆಗೆ ನೇಮಕಾತಿ ಅಧಿಸೂಚನೆ ಹೊರಡಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಗೋವಿಂದರಾಜು** ಅವರು ವಿಶೇಷಚೇತನರ ಶಾಲೆಗೆ ಅಗತ್ಯ ಸಿಬ್ಬಂದಿ, ಶಿಕ್ಷಕರನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಉತ್ತರಿಸಿದರು.

4. **ಶ್ರೀ ಡಿ.ಎಸ್. ಅರುಣ್** ಅವರು ಶಿವಮೊಗ್ಗ ಜಿಲ್ಲೆಯ ಹುಣಸೋಡಿನ ಕಲ್ಲುಕ್ವಾರಿಯ ಜಿಲೆಟಿನ್ ಸ್ಫೋಟದಲ್ಲಿ ವ್ಯಕ್ತಿಗಳ ನಾಪತ್ತೆ ಪ್ರಕರಣದ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಗೃಹ ಸಚಿವರು ಉತ್ತರಿಸಿದರು.

5. **ಶ್ರೀ ಕೆ. ಹರೀಶ್ ಕುಮಾರ್** ಅವರು ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಎಂ. ನಾಗರಾಜು** ಅವರು ಮಾಲೂರು ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಚಿಕಿತ್ಸೆ ವ್ಯವಸ್ಥೆಯಲ್ಲಿನ ಸಮಸ್ಯೆ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಎನ್. ರವಿಕುಮಾರ್** ಅವರು ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ದಿನನಿತ್ಯ ಕೊಲೆ, ಸುಲಿಗೆ, ಡ್ರಗ್ಸ್ ಮಾಫಿಯಾ ಇತ್ಯಾದಿ ಅನೈತಿಕ ಚಟುವಟಿಕೆಗಳಿಂದ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರು ಉತ್ತರ ಕೊಡುವುದಾಗಿ ತಿಳಿಸಿದರು.

8. **ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಸರ್ಕಾರದ ಶಕ್ತಿ ಯೋಜನೆಯಿಂದ ನಷ್ಟಕ್ಕೆ ಒಳಗಾಗಿರುವ ಆಟೋರಿಕ್ಷಾ ಚಾಲಕರಿಗೆ ಪರಿಹಾರ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ** ಅವರು ಚನ್ನಪಟ್ಟಣದಲ್ಲಿ ತಯಾರಿಸುವ ಜಗತ್ಪ್ರಸಿದ್ಧ ಗೊಂಬೆಗಳಿಗೆ ಸರ್ಕಾರದಿಂದ ಪ್ರೋತ್ಸಾಹ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಸಂಕಷ್ಟದಲ್ಲಿರುವ ನೇಕಾರಿಕೆ ಮತ್ತು ನೇಕಾರ ಕುಟುಂಬಗಳ ಹಿತ ಕಾಪಾಡುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

### 3. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಮರಿತಿಬ್ಬೇಗೌಡ** ಅವರು 1ನೇ ತರಗತಿಗೆ ದಾಖಲಿಸಲು ಜೂನ್ 1ನೇ ತಾರೀಖಿಗೆ ಬದಲಾಗಿ ಜೂನ್ 1ರಿಂದ ಜೂನ್ 30ರ ಒಳಗಿನ ದಿನಾಂಕಗಳಲ್ಲಿ ಜನಿಸಿದ ಮಕ್ಕಳೆಲ್ಲರಿಗೂ ಪ್ರವೇಶ ನೀಡುವಂತೆ ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ ದಿನಾಂಕ:06.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.
2. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಗದಗ ಜಿಲ್ಲೆಯ ನಾಗಾವಿ ಗ್ರಾಮದ ಬಗರಹುಕುಂ ಸಾಗುವಳಿದಾರರಿಗೆ ಪರಿಹಾರವನ್ನು ಒದಗಿಸುವ ಬಗ್ಗೆ ದಿನಾಂಕ:10.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.
3. **ಶ್ರೀ ವೈ.ಎಂ. ಸತೀಶ್** ಅವರು ಬಳ್ಳಾರಿ ಜಿಲ್ಲೆಯ, ಜಿಲ್ಲಾಡಳಿತ ಭವನಕ್ಕೆ ಸರ್ಕಾರಿ ಕಛೇರಿಗಳನ್ನು ಸ್ಥಳಾಂತರ ಮಾಡುವ ಬಗ್ಗೆ ದಿನಾಂಕ:11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.
4. **ಡಾ: ವೈ.ಎ. ನಾರಾಯಣಸ್ವಾಮಿ** ಅವರು ರಾಜ್ಯದಲ್ಲಿನ ಗ್ರೂಪ್ 'ಎ' ಮತ್ತು 'ಬಿ' ಸಮೂಹದ ವಿಕಲಚೇತನ ಅಧಿಕಾರಿ ನೌಕರರುಗಳಿಗೆ ಬಡ್ತಿಯಲ್ಲಿ ಶೇ.4ರಷ್ಟು ಮೀಸಲಾತಿ ನೀಡುವ ಬಗ್ಗೆ ದಿನಾಂಕ:11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

5. **ಶ್ರೀ ಮಂಜುನಾಥ್ ಭಂಡಾರಿ** ಅವರು ಸರ್ಕಾರಿ ಶಾಲೆಗಳ ಉನ್ನತಿಗಾಗಿ ಅಗತ್ಯ ಪ್ರಮಾಣದ ಶಿಕ್ಷಕರು, ಹೆಚ್ಚುವರಿ ಸಿಬ್ಬಂದಿ, ಸುಸಜ್ಜಿತ ಕಟ್ಟಡ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ದಿನಾಂಕ:11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

6. **ಶ್ರೀ ಕೆ. ಹರೀಶ್ ಕುಮಾರ್** ಅವರು ರಸ್ತೆ ಅಪಘಾತಗಳನ್ನು ತಡೆಯಲು ಜಾಗೃತಿ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ನಿಯಮ ಮೀರಿ ವಾಹನ ಚಾಲನೆ ಮಾಡುವವರ ಡ್ರೈವಿಂಗ್ ಲೈಸೆನ್ಸ್ ರದ್ದುಗೊಳಿಸುವ ಬಗ್ಗೆ ದಿನಾಂಕ:11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

7. **ಶ್ರೀ ನಿರಾಣಿ ಹಣಮಂತ ರುದ್ರಪ್ಪ** ಅವರು ಕುಡಚಿ–ಬಾಗಲಕೋಟೆ ರೈಲು ಮಾರ್ಗದ ತ್ವರಿತ ಕಾಮಗಾರಿ ಅನುಷ್ಠಾನದ ಬಗ್ಗೆ ದಿನಾಂಕ:11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

8. **ಶ್ರೀಮತಿ ಹೇಮಲತಾ ನಾಯಕ್** ಅವರು ಗದಗ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಆದ್ಯತೆ ಮೇರೆಗೆ ಒದಗಿಸುವ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

### 4. ಗಮನ ಸೆಳೆಯುವ ಸೂಚನೆ

1. **ಶ್ರೀ ಯು.ಬಿ. ವೆಂಕಟೇಶ್** ಅವರು ಬೆಂಗಳೂರು ನಗರದ ಕತ್ರಿಗುಪ್ಪೆ ಗ್ರಾಮದ ಸರ್ವೆ ನಂ.15/1ರಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ

ಕಾಯ್ದಿರಿಸಲಾದ ನಿವೇಶನವನ್ನು ಕೆಲವು ಭೂಗಳ್ಳರು ನಕಲಿ ದಾಖಲೆಗಳನ್ನು ಸೃಷ್ಠಿಸಿಕೊಂಡು ಅತಿಕ್ರಮಿಸಿಕೊಂಡಿರುವ ಕುರಿತು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆದರು.

ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರಿಸಿದರು.

ಮಾನ್ಯ ಶಾಸಕರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಿದರು.

## 5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

21. ಶ್ರೀ ಶರವಣ ಟಿ.ಎ.

ಮಧ್ಯಾಹ್ನ 2.00 ಗಂಟೆಗೆ ಸದನವನ್ನು ಮುಂದೂಡಿ ಸಂಜೆ 3.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಪ್ರಕಟಿಸಿದರು.

ಮಧ್ಯಾಹ್ನ 3.30 ಗಂಟೆಗೆ ಮಾನ್ಯ ಉಪ ಸಭಾಪತಿಯವರ (ಶ್ರೀ ಎಂ.ಕೆ. ಪ್ರಾಣೇಶ್) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 6. ನಿಯಮ 330ರ ಮೇರೆಗೆ

1. **ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯತ್‌ಗಳಲ್ಲಿ ದೈನಂದಿನ ಆಡಳಿತಾತ್ಮಕ ಸಮಸ್ಯೆಗಳು, ಪಂಚತಂತ್ರ ತಂತ್ರಾಂಶ ವ್ಯವಸ್ಥೆಯಲ್ಲಿರುವ ಲೋಪ ದೋಷಗಳು, ಸರ್ವರ್ ಸಮಸ್ಯೆ, ಸಿಬ್ಬಂದಿಗಳ ವೇತನ, ಇನ್ನಿತರೆ ಸಮಸ್ಯೆ ಹಾಗೂ ಬೇಡಿಕೆಗಳ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು

1. ಶ್ರೀ ಕೋಟ ಶ್ರೀನಿವಾಸ ಪೂಜಾರಿ

2. ಶ್ರೀ ಕೆ.ಎ. ತಿಪ್ಪೇಸ್ವಾಮಿ

3. ಶ್ರೀ ಕೆ.ಎಸ್. ನವೀನ್

ಸಂಜೆ 4.05 ಗಂಟೆಯಲ್ಲಿ ಶ್ರೀ ಮರಿತಿಬ್ಬೇಗೌಡ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಉತ್ತರಿಸಿದರು.

**ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ**

22. ಶ್ರೀ ನಸೀರ್ ಅಹ್ಮದ್

23. ಶ್ರೀ ನಿರಾಣಿ ಹಣಮಂತ ರುದ್ರಪ್ಪ

24. ಡಾ: ಡಿ. ತಿಮ್ಮಯ್ಯ

ಸಂಜೆ 5.20 ಗಂಟೆಗೆ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪೀಠದಲ್ಲಿ ಆಸೀನರಾದರು.

25. ಶ್ರೀ ಮರಿತಿಬ್ಬೇಗೌಡ

ಸಂಜೆ 6.30 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:14.07.2023ರಂದು ಬೆಳಿಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**
**ಕಾರ್ಯದರ್ಶಿ.**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಶುಕ್ರವಾರ, ದಿನಾಂಕ:14.07.2023**

**(10)**

ಸದನವು ಬೆಳಗ್ಗೆ: 10.00 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:14.07.2023ರಂದು ಸದನದಲ್ಲಿ ಉತ್ತರಿಸುವ ಸಮೂಹ–Vರ 9ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 121 (930)
2. 122 (924)
3. 123 (877)
4. 124 (861)
5. 125 (918)
6. 126 (888)
7. 127 (906)
8. 128 (929)
9. 129 (911) ಕಾಲಾವಕಾಶ
10. 130 (857)
11. 131 (851)

12. 132 (908)
13. 133 (869)
14. 134 (881)
15. 135 (914)

ದಿನಾಂಕ:14.07.2023ರ ಲಿಖಿತ ಮೂಲಕ ಉತ್ತರಿಸುವ ಸಮೂಹ Vರ 9ನೇ ಪಟ್ಟಿಯ ಒಟ್ಟು 71 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಮೈಸೂರು ಜಿಲ್ಲೆಯ ಟಿ. ನರಸೀಪುರ ಯುವ ಬ್ರಿಗೇಡ್ ಕಾರ್ಯಕರ್ತನ ಹತ್ಯೆ ಬಗ್ಗೆ ದಿನಾಂಕ:11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.
2. **ಶ್ರೀ ನಿರಾಣಿ ಹಣಮಂತ ರುದ್ರಪ್ಪ** ಅವರು ಹಂಪಿ ಕನ್ನಡ ವಿಶ್ವ ವಿದ್ಯಾಲಯದ ವಿದ್ಯುತ್ ಬಿಲ್ ಮನ್ನಾ ಮಾಡುವ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.
3. **ಶ್ರೀ ಗೋವಿಂದರಾಜು** ಅವರು ಮಾಸ್ತಿ ಪೆರಿಯಾತ್ ಗ್ರಂಥಾಲಯ ಹಾಗೂ ಸ್ಮಾರಕ ಭವನಕ್ಕೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.
4. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** ಅವರು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕೆ. ನಿಡುಗಣಿ ಸರ್ವೆ ನಂ.22/1ರಲ್ಲಿನ ಗೋಮಾಳ

ಜಾಗವನ್ನು ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

5. **ಶ್ರೀ ಕೆ. ಹರೀಶ್ ಕುಮಾರ್** ಅವರು ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ದಿನಾಂಕ:13.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

### 3. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ದಿನಾಂಕ: 03ನೇ ಜುಲೈ, 2023ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ ಎಂದು ದಿನಾಂಕ: 05ನೇ ಜುಲೈ, 2023ರಂದು ಶ್ರೀ ಯು.ಬಿ. ವೆಂಕಟೇಶ್‌ರವರು ಸೂಚಿಸಿ, ಶ್ರೀ ಎಂ. ನಾಗರಾಜುರವರು ಅನುಮೋದಿಸಿರುವ ಪ್ರಸ್ತಾವಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸಿದರು.

ಮಧ್ಯಾಹ್ನ 12.35 ಗಂಟೆಗೆ ಶ್ರೀ ಶಶೀಲ್ ಜಿ. ನಮೋಶಿ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಧ್ಯಾಹ್ನ 12.40 ಗಂಟೆಗೆ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಧ್ಯಾಹ್ನ 12.55 ಗಂಟೆಯಲ್ಲಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪೀಠದಲ್ಲಿ ಆಸೀನರಾದರು.

ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸುತ್ತಿದ್ದ ಸಂದರ್ಭದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು (ಭಾರತೀಯ ಜನತಾ ಪಕ್ಷ) ಸಭಾತ್ಯಾಗ ಮಾಡಿದರು.

**ವಂದನಾರ್ಪಣಾ ಪ್ರಸ್ತಾವ**

ದಿನಾಂಕ:03ನೇ ಜುಲೈ, 2023ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುವ ಪ್ರಸ್ತಾವನೆಯನ್ನು ಸದನದ ಮತಕ್ಕೆ ಹಾಕಿ ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಮಧ್ಯಾಹ್ನ 3.00 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:17.07.2023ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಪೀಠದಲ್ಲಿ ಆಸೀನರಾಗಿದ್ದ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**
**ಕಾರ್ಯದರ್ಶಿ.**

# **ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಸೋಮವಾರ, ದಿನಾಂಕ:17.07.2023**

**(11)**

ಸದನವು ಬೆಳಗ್ಗೆ: 11.25 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. **ಪ್ರಕಟಣೆ**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 14.07.2023ರಂದು **"**2023ನೇ ಸಾಲಿನ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ವಿಧೇಯಕ**"** ವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿರುತ್ತದೆಂದು ಹಾಗೂ ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಮಾನ್ಯ ಸಭಾಧ್ಯಕ್ಷರ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2023
2. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2023

**2. ನಿಯಮ 330ಎ ರ ಅಡಿ ವಿಶೇಷ ಪ್ರಸ್ತಾವಗಳು**

1. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.** ಅವರು ಸಾರ್ವಜನಿಕ ಸ್ವಾಮ್ಯದ ಉದ್ದಿಮೆಗಳ ನಷ್ಟದಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗಿರುವ ಬಗ್ಗೆ ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಶೈಕ್ಷಣಿಕ ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಜನಸೇವಾ ಟ್ರಸ್ಟ್‌ಗೆ ಜಮೀನು ಹಂಚಿಕೆ ಮಾಡದಿರುವ ಆದೇಶವನ್ನು ತಡೆಹಿಡಿದಿರುವ ಬಗ್ಗೆ ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

"ಗದ್ದಲ"

3. **ಶ್ರೀ ಮರಿತಿಬ್ಬೇಗೌಡ** ಅವರು ಮಾರ್ಚ್, 2023ರಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆ, ಮೌಲ್ಯ ಮಾಪನ ಕಾರ್ಯಗಳಲ್ಲಿ ಭಾಗವಹಿಸಿರುವ ಬೋಧಕ ಹಾಗೂ ಸಿಬ್ಬಂದಿ ವರ್ಗದವರ ಸಂಭಾವನೆ ಹಾಗೂ ಇತರ ಭತ್ಯೆಗಳ ಬಿಡುಗಡೆ ಬಗ್ಗೆ ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಎನ್. ರವಿಕುಮಾರ್** ಅವರು ನೂತನ ಆಯವ್ಯಯದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಗೆ ಕಡಿಮೆ ಅನುದಾನವನ್ನು ಮೀಸಲಿರಿಸಿ ಕಡೆಗಣಿಸಿರುವ ಬಗ್ಗೆ ಪ್ರಸ್ತಾಪಿಸಿದರು.

   ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಶರವಣ ಟಿ.ಎ.** ಅವರು ಫ್ರೀಡಂ ಪಾರ್ಕ್ ಬಳಿ ಬಹುಮಹಡಿ ವಾಹನ ಸಂಕೀರ್ಣ ನಿರ್ಮಾಣ ಕಾಮಗಾರಿ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಕೆ.ಎ. ತಿಪ್ಪೇಸ್ವಾಮಿ** ಅವರು ಕಂದಾಯ ಇಲಾಖೆಯ ದಿನಾಂಕ:03.05.2010ರಲ್ಲಿ ಹೊರಡಿಸಿರುವ ಸುತ್ತೋಲೆ ಆದೇಶದನ್ವಯ ಗೋಮಾಳ ಹೊರತುಪಡಿಸಿ ವಿಶೇಷ ಹಕ್ಕುಳ್ಳ ಪ್ರದೇಶ ಜಮೀನಿಗೆ ನಿರ್ಬಂಧ ಹೇರಿರುವ ಬಗ್ಗೆ ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆಯ ಪ್ರಸ್ತಾವಗಳಿಗೆ ಉತ್ತರ

1. **ಶ್ರೀ ಡಿ.ಎಸ್. ಅರುಣ್** ಅವರು ಶಿವಮೊಗ್ಗ ಜಿಲ್ಲೆಯ ಹುಣಸೋಡಿನ ಕಲ್ಲುಕ್ವಾರಿಯ ಜಿಲೆಟಿನ್ ಸ್ಫೋಟದಲ್ಲಿ ವ್ಯಕ್ತಿಗಳ ನಾಪತ್ತೆ ಪ್ರಕರಣದ ಬಗ್ಗೆ ದಿನಾಂಕ:13.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.
2. **ಶ್ರೀ ಎನ್. ರವಿಕುಮಾರ್** ಅವರು ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ದಿನನಿತ್ಯ ಕೊಲೆ, ಸುಲಿಗೆ, ಡ್ರಗ್ಸ್ ಮಾಫಿಯಾ ಇತ್ಯಾದಿ ಅನೈತಿಕ ಚಟುವಟಿಕೆಗಳಿಂದ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ದಿನಾಂಕ:13.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

## 4. ವರದಿಯನ್ನೊಪ್ಪಿಸುವುದು

**ಶ್ರೀ ಎಸ್. ರವಿ**(ಸದಸ್ಯರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ) ಅವರ ಪರವಾಗಿ ಮಾನ್ಯ ಸಭಾಪತಿಯವರು ಹದಿನೈದನೇ ವಿಧಾನಸಭೆಯ 2020–21ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹನ್ನೆರಡನೇ ವಿಶೇಷ ವರದಿಯನ್ನು ಒಪ್ಪಿಸಿದರು.

**5. ಗಮನ ಸೆಳೆಯುವ ಸೂಚನೆ**

**1.** **ಶ್ರೀಮತಿ ಹೇಮಲತಾ ನಾಯಕ** ಅವರು ರಾಜ್ಯದಲ್ಲಿ ಮುಂಗಾರು ಬೆಳೆಗೆ ನಿಗದಿತ ಮಳೆ ಪ್ರಮಾಣ ಆಗದಿರುವುದರಿಂದ ಮಳೆ ಆಶ್ರಿತ ಬಿತ್ತನೆ ಪ್ರಮಾಣ ಕಡಿಮೆ ಆಗಿರುವ ಕುರಿತು ಮಾನ್ಯ ಕೃಷಿ ಸಚಿವರ ಗಮನ ಸೆಳೆದರು.

ಮಾನ್ಯ ಕೃಷಿ ಸಚಿವರು ಉತ್ತರಿಸಿದರು.

ಮಾನ್ಯ ಶಾಸಕರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಕೃಷಿ ಸಚಿವರು ಸ್ಪಷ್ಟೀಕರಣ ನೀಡಿದರು.

**2.** **ಶ್ರೀ ಎಸ್.ವ್ಹಿ. ಸಂಕನೂರ** ಅವರು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಕಳೆದ 3–4 ವರ್ಷಗಳಿಂದ ವೇತನ ಹಾಗೂ ನಿವೃತ್ತಿ ವೇತನಕ್ಕೆ ಬೇಕಾದ ಅನುದಾನ ಬಿಡುಗಡೆ ಆಗದಿರುವ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಎಸ್.ವ್ಹಿ. ಸಂಕನೂರ
2. ಡಾ: ತಳವಾರ್ ಸಾಬಣ್ಣ

ಮಾನ್ಯ ಉನ್ನತ ಶಿಕ್ಷಣ ಸಚಿವರು ಸ್ಪಷ್ಟೀಕರಣ ನೀಡಿದರು.

**3.** **ಡಾ: ವೈ.ಎ. ನಾರಾಯಣಸ್ವಾಮಿ** ಅವರು ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಂದ ಪದೋನ್ನತಿ ಪಡೆದು ಶಿಕ್ಷಕರು/ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ 10, 15 ಹಾಗೂ 20 ವರ್ಷಗಳ ಕಾಲಮಿತಿ ವೇತನ ಬಡ್ತಿ ನೀಡದಿರುವ ಕುರಿತು ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರ ಗಮನ ಸೆಳೆದರು.

ಮಧ್ಯಾಹ್ನ 12.15 ಗಂಟೆಗೆ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಡಾ: ವೈ.ಎ. ನಾರಾಯಣಸ್ವಾಮಿ
2. ಶ್ರೀ ಶಶೀಲ್ ಜಿ. ನಮೋಶಿ
3. ಶ್ರೀ ಎಸ್.ಎಲ್. ಭೋಜೇಗೌಡ
4. ಶ್ರೀ ಎಸ್.ವ್ಹಿ. ಸಂಕನೂರ
5. ಶ್ರೀ ಮರಿತಿಬ್ಬೇಗೌಡ

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರು ಸ್ಪಷ್ಟೀಕರಣ ನೀಡಿದರು.

**4** **ಶ್ರೀ ಶರವಣ ಟಿ.ಎ.** ಅವರು ರಾಜ್ಯಾದ್ಯಂತ ಹಾಗೂ ಬೆಂಗಳೂರಿನಲ್ಲಿ ಇತ್ತೀಚೆಗೆ ಪೊಲೀಸ್ ಅಧಿಕಾರಿಗಳು ರಿಕವರಿ ನೆಪದಲ್ಲಿ ಗಿರವಿ ಮತ್ತು ಚಿನ್ನದ ಅಂಗಡಿ ಮಾಲೀಕರಿಗೆ ಕಿರುಕುಳ ನೀಡುತ್ತಿರುವ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆದರು.

ಮಾನ್ಯ ಗೃಹ ಸಚಿವರು ಉತ್ತರಿಸಿದರು.

ಮಧ್ಯಾಹ್ನ 1.00 ಗಂಟೆಗೆ ಶ್ರೀ ಶಶೀಲ್ ಜಿ. ನಮೋಶಿ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಾನ್ಯ ಶಾಸಕರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಗೃಹ ಸಚಿವರು ಸ್ಪಷ್ಟೀಕರಣ ನೀಡಿದರು.

5 **ಶ್ರೀ ಯು.ಬಿ. ವೆಂಕಟೇಶ್** ಅವರು ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಈವರೆವಿಗೂ ಕ್ರಮ ಕೈಗೊಳ್ಳದಿರುವ ಹಾಗೂ ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ವಹಿಸದಿರುವ ಕುರಿತು ಮಾನ್ಯ ಸಹಕಾರ ಸಚಿವರ ಗಮನ ಸೆಳೆದರು.

ಮಾನ್ಯ ಸಹಕಾರ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಯು.ಬಿ. ವೆಂಕಟೇಶ್
2. ಶ್ರೀ ಶರವಣ ಟಿ.ಎ.
3. ಶ್ರೀ ಡಿ.ಎಸ್. ಅರುಣ್
4. ಶ್ರೀಮತಿ ಭಾರತಿ ಶೆಟ್ಟಿ
5. ಡಾ: ತೇಜಸ್ವಿನಿಗೌಡ
6. ಡಾ: ವೈ.ಎ. ನಾರಾಯಣಸ್ವಾಮಿ

ಮಾನ್ಯ ಸಹಕಾರ ಸಚಿವರು ಸ್ಪಷ್ಟೀಕರಣ ನೀಡಿದರು.

6 **ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ** ಅವರು ಬೆಳಗಾವಿ ಜಿಲ್ಲೆಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಬಿ.ಆರ್. ಅಂಬೇಡ್ಕರ್ ಹಾಗೂ ಇತರೆ ಸರ್ಕಾರಿ ವಸತಿ ಶಿಕ್ಷಣ ಶಾಲೆಗಳಲ್ಲಿ ಪ್ರೌಢ ಶಿಕ್ಷಣ ವ್ಯಾಸಂಗ ಮುಗಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಪದವಿ ಪೂರ್ವ ಶಿಕ್ಷಣ ಪೂರೈಸಲು ಅನುವಾಗುವಂತೆ ಸದರಿ ವಸತಿ ಶಾಲೆಗಳನ್ನು ಉನ್ನತೀಕರಿಸುವ ಕುರಿತು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ

2. ಶ್ರೀ ಎಸ್.ಎಲ್. ಭೋಜೇಗೌಡ

ಮಾನ್ಯ ಸಮಾಜ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

**6. ನಿಯಮ 330ರ ಮೇರೆಗೆ**

1. **ಶ್ರೀ ಮರಿತಿಬ್ಬೇಗೌಡ** ಅವರು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 2011ನೇ ಸಾಲಿನಲ್ಲಿ ನೇಮಕವಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ಪದೋನ್ನತಿಯನ್ನು ನೀಡದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಮರಿತಿಬ್ಬೇಗೌಡ

2. ಶ್ರೀ ಎಸ್.ಎಲ್. ಭೋಜೇಗೌಡ

3. ಡಾ: ವೈ.ಎ. ನಾರಾಯಣಸ್ವಾಮಿ

ಮಾನ್ಯ ಸಭಾಪತಿಯವರು ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಸಚಿವರುಗಳ ಪಟ್ಟಿಯನ್ನು ಓದಿದರು.

1. ಶ್ರೀ ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
2. ಡಾ: ಶರಣ ಪ್ರಕಾಶ್ ಪಾಟೀಲ, ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು
3. ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

4. ಶ್ರೀ ಮಧು ಬಂಗಾರಪ್ಪ, ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರು
5. ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
6. ಶ್ರೀ ರಹೀಂ ಖಾನ್, ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು
7. ಶ್ರೀ ಆರ್.ಬಿ. ತಿಮ್ಮಾಪೂರ, ಮಾನ್ಯ ಅಬಕಾರಿ ಸಚಿವರು
8. ಶ್ರೀ ಬಿ. ನಾಗೇಂದ್ರ, ಮಾನ್ಯ ಯುವಜನ ಸೇವೆಗಳು, ಕ್ರೀಡೆಗಳು ಮತ್ತು ಪರಿಶಿಷ್ಠ ವರ್ಗಗಳ ಕಲ್ಯಾಣ ಸಚಿವರು
9. ಶ್ರೀ ಸಂತೋಷ್ ಎಸ್. ಲಾಡ್, ಮಾನ್ಯ ಕಾರ್ಮಿಕ ಸಚಿವರು
10. ಶ್ರೀ ಶರಣಬಸಪ್ಪ ದರ್ಶನಾಪೂರ, ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು
11. ಶ್ರೀ ಡಿ. ಸುಧಾಕರ್, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು
12. ಶ್ರೀ ಮಂಕಾಳ್ ವೈದ್ಯ, ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ಉನ್ನತ ಶಿಕ್ಷಣ ಸಚಿವರು ಸ್ಪಷ್ಟೀಕರಣ ನೀಡಿದರು.

ಮಧ್ಯಾಹ್ನ 2.10 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.30 ಗಂಟೆಗೆ ಸಭೆ ಸೇರುವುದಾಗಿ ಪೀಠದಲ್ಲಿ ಆಸೀನರಾಗಿದ್ದ ಮಾನ್ಯ ಸಭಾಪತಿಯವರು (ಶ್ರೀ ಶಶೀಲ್ ಜಿ. ನಮೋಶಿ) ಪ್ರಕಟಿಸಿದರು.

ಮಧ್ಯಾಹ್ನ 3.50 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ಗಮನ ಸೆಳೆಯುವ ಸೂಚನೆ**

7. **ಶ್ರೀ ಗೋವಿಂದರಾಜು** ಅವರು ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ರಾಜ್ಯ ಹೆದ್ದಾರಿ ರಸ್ತೆ, ಸೇತುವೆಗಳು, ನ್ಯಾಯಾಧೀಶರ ಕಟ್ಟಡಗಳು ಹಾಗೂ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿಗಳನ್ನು ಗುತ್ತಿಗೆದಾರರು ಪೂರ್ಣಗೊಳಿಸಿದ್ದರೂ ಇದುವರೆಗೂ ಬಾಕಿ ಹಣ ಬಿಡುಗಡೆಯಾಗದಿರುವ ಕುರಿತು ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆದರು.

ಮಾನ್ಯ ಲೋಕೋಪಯೋಗಿ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಗೋವಿಂದರಾಜು
2. ಶ್ರೀ ಕೆ.ಎ. ತಿಪ್ಪೇಸ್ವಾಮಿ

ಮಾನ್ಯ ಲೋಕೋಪಯೋಗಿ ಸಚಿವರು ಸ್ಪಷ್ಟೀಕರಣ ನೀಡಿದರು.

**ನಿಯಮ 330ರ ಮೇರೆಗೆ**

2. **ಡಾ: ತೇಜಸ್ವಿನಿಗೌಡ** ಅವರು ಬೆಂಗಳೂರಿನ **'ಸೆಂಚುರಿ ಕ್ಲಬ್'**ನ್ನು Park Zone (ಉದ್ಯಾನ ವಲಯ) ನಿಂದ ಕೈಬಿಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಎನ್. ರವಿಕುಮಾರ್
2. ಶ್ರೀ ಯು.ಬಿ. ವೆಂಕಟೇಶ್

3. ಶ್ರೀ ಮರಿತಿಬ್ಬೇಗೌಡ

4. ಶ್ರೀ ಎಸ್.ಎಲ್. ಭೋಜೇಗೌಡ

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಸ್ಪಷ್ಟೀಕರಣ ನೀಡಿದರು.

**7. ಪ್ರಕಟಣೆ**

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಪ್ರಸಕ್ತ ಅಧಿವೇಶನದಲ್ಲಿ ಪೂರ್ವ ನಿಗದಿತ ಕಾರ್ಯಕ್ರಮದ ಕಾರಣ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲದ ಕಾರಣ ಸದನದ ಕಾರ್ಯಕಲಾಪಗಳಲ್ಲಿ ಗೈರು ಹಾಜರಾಗಲು ಅನುಮತಿ ಕೋರಿರುವ ಬಗ್ಗೆ ಮಾನ್ಯ ಸಭಾಪತಿಯವರು ಪ್ರಕಟಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

**ನಿಯಮ 330ರ ಮೇರೆಗೆ**

3. **ಶ್ರೀಯುತರುಗಳಾದ ತಿಪ್ಪಣ್ಣಪ್ಪ, ಶಶೀಲ್ ಜಿ. ನಮೋಶಿ, ಎನ್. ರವಿಕುಮಾರ್, ಡಾ: ತಳವಾರ್ ಸಾಬಣ್ಣ ಹಾಗೂ ಛಲವಾದಿ ಟಿ. ನಾರಾಯಣಸ್ವಾಮಿ** ಅವರುಗಳು ಕಲ್ಬುರ್ಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ನಾರಾಯಣಪುರ ಗ್ರಾಮದಲ್ಲಿ ರೈತರೊಬ್ಬರು ಟ್ರ್ಯಾಕ್ಟರ್ ಮೂಲಕ ಅಕ್ರಮವಾಗಿ ಮರಳು ಸಾಗಿಸುತ್ತಿದ್ದಾಗ ತಡೆಯಲು ಆ ಸಂದರ್ಭದಲ್ಲಿ ಅಡ್ಡ ಬಂದ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್‌ರವರ ಮೇಲೆ ಟ್ರ್ಯಾಕ್ಟರ್‌ನ ಹುಕ್ಕು ಕಳಚಿಕೊಂಡು ಟ್ರ್ಯಾಕ್ಟರ್ ಹತ್ತಿ ಸಾವಿಗೀಡಾಗಿರುತ್ತಾರೆ. ಈ ಸಾವು ಸಂಭವಿಸಿದ ಪ್ರಕರಣದಲ್ಲಿ ದಿನಾಂಕ: 17.06.2023 ರಂದು ಟ್ರ್ಯಾಕ್ಟರ್‌ನ ಮಾಲೀಕರ ತಂದೆಯವರನ್ನು ಪೊಲೀಸರು ಬಂಧಿಸಿ, ಕಾಲಿಗೆ ಶೂಟ್‌ಔಟ್ ಮಾಡಿರುವ ಘಟನೆಯ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ತಿಪ್ಪಣ್ಣಪ್ಪ
2. ಶ್ರೀ ಶಶೀಲ್ ಜಿ. ನಮೋಶಿ
3. ಶ್ರೀ ಎನ್. ರವಿಕುಮಾರ್
4. ಡಾ: ತಳವಾರ್ ಸಾಬಣ್ಣ

ಮಾನ್ಯ ಗೃಹ ಸಚಿವರು ಉತ್ತರಿಸಿದರು.

ಮಾನ್ಯ ಸಚಿವರ ಉತ್ತರವನ್ನು ವಿರೋಧಿಸಿ ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ತಿಳಿಸಿ ವಿರೋಧ ಪಕ್ಷದ ಮಾನ್ಯ ಶಾಸಕರುಗಳು (ಭಾರತೀಯ ಜನತಾ ಪಕ್ಷ) ಸದನದ ಬಾವಿಗಿಳಿದರು.

**ಪ್ರಕಟಣೆ**

**2.** ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:17.07.2023ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆ ಎಂದು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

1. ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ, 2023
2. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2023

3. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023

ಸಂಜೆ: 5.40 ಗಂಟೆಯಲ್ಲಿ ಸದನವನ್ನು ಮುಂದೂಡಿ ದಿನಾಂಕ:18.07.2023ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**

**ಕಾರ್ಯದರ್ಶಿ.**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಂಗಳವಾರ, ದಿನಾಂಕ:18.07.2023**

**(12)**

ಸದನವು ಬೆಳಗ್ಗೆ: 11.10 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ದಿನಾಂಕ:17.07.2023ರಂದು ನಿಯಮ 330ರ ಮೇರೆಗೆ **ಶ್ರೀಯುತರುಗಳಾದ ತಿಪ್ಪಣ್ಣಪ್ಪ, ಶಶೀಲ್ ಜಿ. ನಮೋಶಿ, ಎನ್. ರವಿಕುಮಾರ್, ಡಾ: ತಳವಾರ್ ಸಾಬಣ್ಣ ಹಾಗೂ ಛಲವಾದಿ ಟಿ. ನಾರಾಯಣಸ್ವಾಮಿ** ಅವರುಗಳು ಕಲ್ಬುರ್ಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ನಾರಾಯಣಪುರ ಗ್ರಾಮದಲ್ಲಿ ರೈತರೊಬ್ಬರು ಟ್ರ್ಯಾಕ್ಟರ್ ಮೂಲಕ ಅಕ್ರಮವಾಗಿ ಮರಳು ಸಾಗಿಸುತ್ತಿದ್ದಾಗ ತಡೆಯಲು ಆ ಸಂದರ್ಭದಲ್ಲಿ ಅಡ್ಡ ಬಂದ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್‌ರವರ ಮೇಲೆ ಟ್ರ್ಯಾಕ್ಟರ್‌ನ ಹುಕ್ಕು ಕಳಚಿಕೊಂಡು ಟ್ರ್ಯಾಕ್ಟರ್ ಹತ್ತಿ ಸಾವಿಗೀಡಾಗಿರುತ್ತಾರೆ. ಈ ಸಾವು ಸಂಭವಿಸಿದ ಪ್ರಕರಣದಲ್ಲಿ ದಿನಾಂಕ:17.06.2023ರಂದು ಟ್ರ್ಯಾಕ್ಟರ್‌ನ ಮಾಲೀಕರ ತಂದೆಯವರನ್ನು ಪೊಲೀಸರು ಬಂಧಿಸಿ, ಕಾಲಿಗೆ ಶೂಟ್‌ಔಟ್ ಮಾಡಿರುವ ಘಟನೆಯ ಕುರಿತು ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಗೃಹ ಸಚಿವರು ನೀಡಿದ ಉತ್ತರವನ್ನು ವಿರೋಧಿಸಿ ವಿರೋಧ ಪಕ್ಷದ ಮಾನ್ಯ ಶಾಸಕರುಗಳು(ಬಿ.ಜೆ.ಪಿ) ಬಾವಿಯಲ್ಲಿ ಧರಣಿ ನಿರತರಾದರು.

"ಗದ್ದಲ"

ಮಾನ್ಯ ಗೃಹ ಸಚಿವರು ಪ್ರಕರಣವನ್ನು ಸಿ.ಐ.ಡಿ ತನಿಖೆಗೆ ನೀಡಿರುವುದಾಗಿ ಉತ್ತರಿಸಿದರು. ವಿರೋಧ ಪಕ್ಷದ ಮಾನ್ಯ ಶಾಸಕರುಗಳು (ಭಾರತೀಯ ಜನತಾ ಪಕ್ಷ) ತಮ್ಮ ತಮ್ಮ ಆಸನಗಳಿಗೆ ತೆರಳಿದರು.

**1. ತಡೆಹಿಡಿಯಲಾದ ಪ್ರಶ್ನೆ**

**ದಿನಾಂಕ:11.07.2023ರ ಸಮೂಹ–IIರ 6ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಮಧು ಜಿ. ಮಾದೇಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆ**

1. 90 (595)

**ದಿನಾಂಕ:12.07.2023ರ ಸಮೂಹ–IIIರ 7ನೇ ಪಟ್ಟಿಯಿಂದ ತಡೆಹಿಡಿಯಲಾದ ಡಾ: ತಳವಾರ್ ಸಾಬಣ್ಣ ಅವರ ಚುಕ್ಕೆ ಗುರುತಿನ ಪ್ರಶ್ನೆ**

1. 102 (723)

**2. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು**

1. **ಶ್ರೀ ಸಿ.ಎನ್. ಮಂಜೇಗೌಡ** ಅವರು ಮೈಸೂರು ನಗರದ ಪಾರಂಪರಿಕ ಕಟ್ಟಡಗಳ ರಕ್ಷಣೆಗಾಗಿ ಅನುದಾನ ಬಿಡುಗಡೆ ನೀಡುವ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಶಾಂತರಾಮ್ ಬುಡ್ನ** ಸಿದ್ದಿ ಅವರು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಯಲ್ಲಾಪುರ ಗ್ರಾಮದಲ್ಲಿ ನಡೆಸುತ್ತಿರುವ ಬುಡಕಟ್ಟು ಜನಾಂಗದ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕಾಗಿ ನೀಡಿರುವ ಮಂಜೂರು ಆದೇಶಕ್ಕೆ ತಡೆ ನೀಡಿರುವ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಮುನಿರಾಜು ಗೌಡ ಪಿ.ಎಂ.** ಅವರು ಹೆಬ್ಬಾಳ ಮೇಲ್ಸೇತುವೆ ಕೆಳಗಿರುವ ಕಿರು ಅರಣ್ಯವನ್ನು ಸ್ವಚ್ಛಗೊಳಿಸುವ ಮೂಲಕ ಅಕ್ರಮ ಚಟುವಟಿಕೆ ತಡೆಯಲು ಸುರಕ್ಷತಾ ಕ್ರಮಗಳನ್ನು

ತೆಗೆದುಕೊಳ್ಳುವುದರೊಂದಿಗೆ ಅಭಿವೃದ್ಧಿಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

ಕಾರ್ಯದರ್ಶಿಯವರು ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು.

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2023
2. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2023
3. ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ವಿಧೇಯಕ, 2023

**4. ನಿಲುವಳಿ ಸೂಚನೆ**

**ಶ್ರೀ ಕೋಟ ಶ್ರೀವಾಸ ಪೂಜಾರಿ** ಅವರು ರಾಜ್ಯದಲ್ಲಿ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮುಂಗಾರು ಮಳೆಯಗದೇ ಹಲವು ಜಿಲ್ಲೆಗಳಲ್ಲಿ ಬರಗಾಲ ಆವರಿಸಿದ್ದು, ಮಳೆಯಿಲ್ಲದ ಜಿಲ್ಲೆಗಳನ್ನು ಬರಗಾಲ ಜಿಲ್ಲೆಗಳೆಂದು ಘೋಷಣೆ ಮಾಡಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಒದಗಿಸುವುದು ಸೇರಿದಂತೆ, ಆತ್ಮಹತ್ಯೆ ಹಾದಿ ಹಿಡಿಯುತ್ತಿರುವ ಸಂಕಷ್ಟಕ್ಕೆ ಒಳಗಾದ ರೈತರಿಗೆ ಭರವಸೆ ತುಂಬುವ ಕೆಲಸ ಹಾಗೂ ಈಗಾಗಲೇ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬಕ್ಕೆ ಪರಿಹಾರ ಘೋಷಿಸಿ ರಾಜ್ಯದಲ್ಲಿ ಆವರಿಸುವ ಬರವನ್ನು ನಿರ್ವಹಣೆ ಮಾಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾಪತಿಯವರು ನಿಲುವಳಿ ಸೂಚನೆಯನ್ನು ನಿಯಮ 68ರ ಅಡಿಯಲ್ಲಿ ಪರಿವರ್ತಿಸಿ ಚರ್ಚೆಗೆ ಅವಕಾಶ ನೀಡಿರುವುದಾಗಿ ತಿಳಿಸಿದರು.

**5. ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

1. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ **"**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ**"**, 2023ರ ಕುರಿತು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ವಿಧೇಯಕದ ಕುರಿತು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಕೆ.ಎ. ತಿಪ್ಪೇಸ್ವಾಮಿ
2. ಕೋಟ ಶ್ರೀನಿವಾಸ ಪೂಜಾರಿ
3. ಎಸ್.ಎಲ್. ಭೋಜೇಗೌಡ
4. ಎನ್. ರವಿಕುಮಾರ್
5. ಛಲವಾದಿ ಟಿ. ನಾರಾಯಣಸ್ವಾಮಿ
6. ಶರವಣ ಟಿ.ಎ
7. ಡಾ: ವೈ.ಎ. ನಾರಾಯಣಸ್ವಾಮಿ
8. ಸುನೀಲ್ ವಲ್ಯಾಪುರ್

9. ಕೇಶವ ಪ್ರಸಾದ್ ಎಸ್

10. ನಸೀರ್ ಅಹ್ಮದ್

11. ಎಂ. ನಾಗರಾಜು

12. ತಿಪ್ಪಣ್ಣಪ್ಪ

13. ಮರಿತಿಬ್ಬೇಗೌಡ

14. ಪ್ರಕಾಶ್ ಬಾಬಣ್ಣ ಹುಕ್ಕೇರಿ

15. ಡಾ: ಡಿ. ತಿಮ್ಮಯ್ಯ

16. ಎಂ.ಎಲ್. ಅನಿಲ್ ಕುಮಾರ್

17. ಅರವಿಂದ ಕುಮಾರ್ ಅರಳಿ

18. ಚಿದಾನಂದ್ ಎಂ. ಗೌಡ

ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಮಧ್ಯಾಹ್ನ 12.15 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

2. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ"ದ ಕುರಿತು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಪರ್ಯಾಲೋಚಿಸಿ

ಅಂಗೀಕರಿಸಬೇಕೆಂದು ಸೂಚಿಸಿ ವಿಧೇಯಕದ ಕುರಿತು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಕೆ.ಎ. ತಿಪ್ಪೇಸ್ವಾಮಿ
2. ಡಾ: ವೈ.ಎ. ನಾರಾಯಣಸ್ವಾಮಿ
3. ಡಿ.ಎಸ್. ಅರುಣ್
4. ಡಾ: ತೇಜಸ್ವಿನಿಗೌಡ
5. ಎಸ್.ಎಲ್. ಭೋಜೇಗೌಡ
6. ಕೆ.ಎಸ್. ನವೀನ್
7. ಮುನಿರಾಜು ಗೌಡ ಪಿ.ಎಂ
8. ಎಂ. ನಾಗರಾಜು
9. ಮಂಜುನಾಥ್ ಭಂಡಾರಿ
10. ಗೋವಿಂದರಾಜು

ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

3. ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ “ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ವಿಧೇಯಕ”ದ ಕುರಿತು

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ವಿಧೇಯಕದ ಕುರಿತು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಕೆ.ಎ. ತಿಪ್ಪೇಸ್ವಾಮಿ

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

**ಸಭೆಯ ಮುಂದಿಡಲಾಗುವ ಕಾಗದ ಪತ್ರ**

4. ಕಾರ್ಯದರ್ಶಿಯವರು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ 2023ನ್ನು ಸಭೆಯ ಮುಂದೆ ಮಂಡಿಸಿದರು.

**ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ವಿಧೇಯಕದ ಕುರಿತು ವಿವರಣೆ ನೀಡಿದರು.

ಮಧ್ಯಾಹ್ನ 1.40 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಪ್ರಕಟಿಸಿದರು.

ಮಧ್ಯಾಹ್ನ 3.20 ಗಂಟೆಗೆ ಮಾನ್ಯ ಉಪ ಸಭಾಪತಿಯವರ (ಶ್ರೀ ಎಂ.ಕೆ. ಪ್ರಾಣೇಶ್) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ವಿವರಣೆಯನ್ನು ಮುಂದುವರೆಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಡಾ: ತಳವಾರ್ ಸಾಬಣ್ಣ

2. ಶ್ರೀ ಕೆ.ಎಸ್. ನವೀನ್

ಮಧ್ಯಾಹ್ನ 3.55 ಗಂಟೆಗೆ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪೀಠದಲ್ಲಿ ಆಸೀನರಾದರು.

3. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

**6. ಪ್ರಕಟಣೆ**

2021 ಹಾಗೂ 2022ನೇ ಸಾಲಿನ ವಿಧಾನ ಪರಿಷತ್ತಿನ **"**ಅತ್ಯುತ್ತಮ ಶಾಸಕ**"** ಪ್ರಶಸ್ತಿ ಪ್ರದಾನ ಸಮಾರಂಭವನ್ನು ಈ ದಿನ ಸಂಜೆ 6.00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣ (ಕೊಠಡಿ ಸಂಖ್ಯೆ: 334)ರಲ್ಲಿ ಏರ್ಪಡಿಸಲಾಗಿದ್ದು, ಸದರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಲ್ಲಾ ಮಾನ್ಯ ಶಾಸಕರು ಉಪಸ್ಥಿತರಿರಬೇಕೆಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.**

4. ಶ್ರೀ ಗೋವಿಂದರಾಜು

5. ಶ್ರೀ ಡಿ.ಎಸ್. ಅರುಣ್

6. ಶ್ರೀ ಮರಿತಿಬ್ಬೇಗೌಡ

7. ಶ್ರೀ ಮುನಿರಾಜು ಗೌಡ ಪಿ.ಎಂ.

8. ಶ್ರೀ ಕೆ. ಹರೀಶ್ ಕುಮಾರ್

9. ಡಾ: ವೈ.ಎ. ನಾರಾಯಣಸ್ವಾಮಿ

10. ಶ್ರೀ ಪಿ.ಹೆಚ್. ಪೂಜಾರ್

11. ಡಾ: ತೇಜಸ್ವಿನಿಗೌಡ

12. ಶ್ರೀ ಎಸ್.ಎಲ್. ಭೋಜೇಗೌಡ

ಸಂಜೆ 5.10 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಸಭಾಪತಿಯವರ ಪೀಠದಲ್ಲಿ ಆಸೀನರಾದರು.

13. ಶ್ರೀ ಪ್ರಕಾಶ್ ಕೆ. ರಾಥೋಡ್

14. ಶ್ರೀ ಎಸ್.ವ್ಹಿ. ಸಂಕನೂರ

ಸಂಜೆ 5.25 ಗಂಟೆಗೆ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪೀಠದಲ್ಲಿ ಆಸೀನರಾದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಉತ್ತರಿಸಿದರು.

15. ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಅವರು ವಿಧೇಯಕವನ್ನು ಪರಿಶೀಲನಾ ಸಮಿತಿಗೆ ವಹಿಸಬೇಕೆಂದು ಒತ್ತಾಯಿಸಿ ಮತಕ್ಕೆ ಹಾಕಲು ಸೂಚಿಸಿದರು.

16. ಶ್ರೀ ಎನ್. ರವಿಕುಮಾರ್

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಸ್ಪಷ್ಟೀಕರಣ ನೀಡಿದರು.

ಮಾನ್ಯ ಸಭಾಪತಿಯವರು ಪ್ರಸ್ತಾವವನ್ನು ಮತಕ್ಕೆ ಹಾಕಿದರು.

ಪ್ರಸ್ತಾವದ ಪರವಾಗಿ 31 ಮತಗಳು

ಪ್ರಸ್ತಾವದ ವಿರುದ್ಧವಾಗಿ 21 ಮತಗಳು

ಪ್ರಸ್ತಾವವು ಅಂಗೀಕೃತವಾಗಿದೆ ಹಾಗೂ ಪರಿಶೀಲನಾ ಸಮಿತಿಗೆ ವಹಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸಂಜೆ 5.50 ಗಂಟೆಯಲ್ಲಿ ಸದನವನ್ನು ಮುಂದೂಡಿ ದಿನಾಂಕ:19.07.2023ರಂದು ಬೆಳಿಗ್ಗೆ 10.00 ಗಂಟೆಗೆ ಸೇರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಬುಧವಾರ, ದಿನಾಂಕ:19.07.2023**

**(13)**

ಸದನವು ಬೆಳಗ್ಗೆ: 10.15 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ) ಕಾರ್ಯದರ್ಶಿಯವರು ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು.

1. ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ, 2023
2. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2023

ಆ) ಮಾನ್ಯ ಸಭಾನಾಯಕರು ಹಾಗೂ ಸಾರಿಗೆ ಸಚಿವರು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮೂರನೇ ಮತ್ತು ನಾಲ್ಕನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಿದರು.

## 2. ಅಭಿನಂದನಾ ಪ್ರಸ್ತಾವ

ಶ್ರೀ ರಾಹುಲ್ ಕರಾಡ್ ಜೀ ಅವರು ಎಂ.ಐ.ಟಿ. ಸ್ಕೂಲ್ ಆಫ್ ಗೌರ್ನಮೆಂಟ್ ಪುಣೆ, ಇವರ ವತಿಯಿಂದ ರಾಷ್ಟ್ರಮಟ್ಟದ ನ್ಯಾಷನಲ್ ಲೆಜಿಸ್ಲೇಟರ್ಸ್ ಕಾನ್ಫರೆನ್ಸ್–2023ನ್ನು ದಿನಾಂಕ:15.06.2023 ರಿಂದ 17.06.2023ರವರೆಗೆ ಮುಂಬೈನ ಜಿಯೋ ವರ್ಲ್ಡ್ ಸೆಂಟರ್ ಮುಂಬೈನಲ್ಲಿ ಸಮರ್ಥ ಭಾರತವನ್ನು ನಿರ್ಮಾಣ ಮಾಡುವ ದಿಶೆಯಲ್ಲಿ ಸಮಗ್ರ ದೂರದೃಷ್ಟಿಯಿಂದ ಆಯೋಜಿಸಿದ್ದು, ಸಮ್ಮೇಳನದ ರುವಾರಿಯಾಗಿರುವ

ಶ್ರೀ ರಾಹುಲ್ ಕರಾಡ್ ಜೀ ಹಾಗೂ ಅವರ ತಂಡಕ್ಕೆ ಅಭಿನಂದನೆಯನ್ನು ಸಲ್ಲಿಸುವಂತೆ ಮಾನ್ಯ ಶಾಸಕರಾದ ಶ್ರೀಮತಿ ಭಾರತಿ ಶೆಟ್ಟಿ ಅವರು ಅಭಿನಂದನಾ ಪ್ರಸ್ತಾವವನ್ನು ಮಂಡಿಸಿದರು.

ಈ ಕೆಳಕಂಡ ಅಭಿನಂದನಾ ಪ್ರಸ್ತಾವವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ಮಾನ್ಯ ಸಭಾನಾಯಕರು ಸರ್ಕಾರದ ಸಹಮತಿ ಇದೆ ಎಂದು ಸೂಚಿಸಿದರು.

**ಅಭಿನಂದನಾ ನಿರ್ಣಯ**

ಒಂದು ಆರೋಗ್ಯ ಪೂರ್ಣ ಸಮಾಜ ನಿರ್ಮಿಸಲು ಕೆಲವು ನಿಸ್ವಾರ್ಥ ಮನಸುಗಳ ಕನಸು ಹಾಗೂ ದೂರದೃಷ್ಟಿ ತುಂಬಾ ಕಾರಣವಾಗುತ್ತದೆ. ಇದಕ್ಕೆ ಒಂದು ಜ್ವಲಂತ ಉದಾಹರಣೆ ಶ್ರೀರಾಹುಲ್ ಕರಾಡ್ ಜೀ ಹಾಗೂ ಅವರ ಕಲ್ಪನೆಯ ಕೂಸಾದ ಎಂ.ಐ.ಟಿ ಸ್ಕೂಲ್ ಆಫ್ ಗೌರ್ನಮೆಂಟ್. ಶ್ರೀ ರಾಹುಲ್ ಕರಾಡ್ ಜೀ ರವರು ಸಮಾಜದಲ್ಲಿ ರಾಜಕೀಯ ಪ್ರಜ್ಞೆಯ ಹಣತೆಯನ್ನು ಹಚ್ಚ ಬಯಸಿದವರು ಈ ದಿಶೆಯಲ್ಲಿನ ಅವರ ಅವಿರತ ಶ್ರಮದ ಫಲವಾಗಿ ನಾಯಕತ್ವ, ಪ್ರಜಾಪ್ರಭುತ್ವ, ಆಡಳಿತ ಹಾಗೂ ಶಾಂತಿ ಸ್ಥಾಪನೆಗಳಿಗಾಗಿ ಭಾರತದ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಶಾಸಕರುಗಳಿಗೆ ಪ್ರಪ್ರಥಮ ಹಾಗೂ ಬಹು ದೊಡ್ಡ ವೇದಿಕೆಯನ್ನು ಕಲ್ಪಿಸಲು ರಾಷ್ಟ್ರಮಟ್ಟದ ನ್ಯಾಷನಲ್ ಲೆಜಿಸ್ಲೇಟರ್ಸ್ ಕಾನ್ಫರೆನ್ಸ್–2023ನ್ನು ದಿನಾಂಕ:15.06.2023 ರಿಂದ 17.06.2023ರವರೆಗೆ ಜಿಯೋವರ್ಲ್ಡ್ ಸೆಂಟರ್ ಮುಂಬೈನಲ್ಲಿ ಆಯೋಜಿಸಿದರೆಂದು ಪರಿಭಾವಿಸಬೇಕಾಗುತ್ತದೆ.

ಈ ಸಮ್ಮೇಳನದಲ್ಲಿ ನಮ್ಮ ನೀತಿ ನಿರೂಪಕರು ಅಂದರೆ ಶಾಸಕರುಗಳ ಜವಾಬ್ದಾರಿಯನ್ನು ನೆನಪಿಸುವ ಹಾಗೂ ಪ್ರಜ್ಞೆಯಾಗಿಸುವ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಸಮ್ಮೇಳನವನ್ನು ರಾಷ್ಟ್ರದ ಶಾಸಕಾಂಗ ಕ್ಷೇತ್ರದ ದಿಗ್ಗಜರುಗಳಾದ ಶ್ರೀಮತಿ ಸುಮಿತ್ರಾ ಮಹಾಜನ್, ಮಾಜಿ ಸಭಾಧ್ಯಕ್ಷರು, ಲೋಕಸಭೆ,

ಶ್ರೀಮತಿ ಮೀರಾಕುಮಾರ ಮಾಜಿ ಸಭಾಧ್ಯಕ್ಷರು, ಲೋಕಸಭೆ, ಶ್ರೀಯುತ ಮನೋಹರ್ ಜೋಷಿ, ಮಾಜಿ ಸಭಾಧ್ಯಕ್ಷರು, ಲೋಕಸಭೆ, ಶ್ರೀಯುತ ಶಿವರಾಜ್ ಪಾಟೀಲ್, ಮಾಜಿ ಸಭಾಧ್ಯಕ್ಷರು ಲೋಕಸಭೆ ಇವರುಗಳ ಮಾರ್ಗದರ್ಶನದಲ್ಲಿ ಶ್ರೀಯುತ ರಾಹುಲ್ ಕರಾಡ್ ಜೀರವರು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿರುತ್ತಾರೆ. ಪ್ರಜಾ ಪ್ರಭುತ್ವವನ್ನು ಶಕ್ತಗೊಳಿಸುವ ಮೂಲಕ ಶಕ್ತಿಶಾಲಿ ಸಮರ್ಥ ಭಾರತದ ನಿರ್ಮಾಣ ಮಾಡುವ ಶ್ರೀಯುತರ ಆಶಯಕ್ಕೆ ಪೂರಕವಾದ ವಿಷಯಗಳಲ್ಲಿ ವಿಷಯ ತಜ್ಞರಿಂದ ಪ್ರಬಂಧ ಮಂಡನೆಯನ್ನು ಮಾಡಿಸಿರುತ್ತಾರೆ. ಇಂತಹ ಅಪರೂಪದ ಹಾಗೂ ವಿಶಿಷ್ಟವಾದ ಸಮ್ಮೇಳನದಲ್ಲಿ ಏರ್ಪಡಿಸಲಾಗಿದ್ದ ಹಲವಾರು ವಿಚಾರ ಗೋಷ್ಠಿಗಳ ಪೈಕಿ

1. EMBRACE TECHNOLOGY FOR ECONOMIC WELFARE
2. WORK-LIFE BALANCE: A KEY TO SUCCESS

ಇವುಗಳ ಅಧ್ಯಕ್ಷತೆಯನ್ನು ನಾನು ವಹಿಸಿದ್ದೆನು.

ಈಗ NCTIONING OF THE LEGISLATORS: THE CHALLENGES & ROAD AHEAD ವಿಷಯ ಕುರಿತಂತೆ, ಎಲ್ಲಾ ರಾಜ್ಯಗಳ ವಿಧಾನಮಂಡಲದ ಕಾರ್ಯದರ್ಶಿಗಳು ಭಾಗವಹಿಸುವಂತೆ ದುಂಡು ಮೇಜಿನ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ನಮ್ಮ ಕಾರ್ಯದರ್ಶಿಯವರಾದ ಶ್ರೀಮತಿ ಕೆ.ಆರ್. ಮಹಾಲಕ್ಷ್ಮಿರವರು ಭಾಗವಹಿಸಿದ್ದರು ಅಲ್ಲದೆ ನಮ್ಮ ವಿಧಾನ ಪರಿಷತ್ತಿನ 25 ಜನ ಮಾನ್ಯ ಶಾಸಕರುಗಳು ಈ ಸಮ್ಮೇಳನದಲ್ಲಿ ಸಕ್ರಿಯವಾಗಿ ಹಾಗೂ ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು ಎಂಬ ವಿಷಯವನ್ನು ಅತ್ಯಂತ ಸಂತೋಷದಿಂದ ಈ ಸದನದಲ್ಲಿ ತಿಳಿಸಲು ಬಯಸುತ್ತೇನೆ.

ಇಂತಹ ವಿವೇಕಯುತ ಹಾಗೂ ಗಂಭೀರ ಕಲ್ಪನೆಯನ್ನು ಅತ್ಯಂತ ಅರ್ಥ ಪೂರ್ಣವಾಗಿ ಸಾಕಾರಗೊಳಿಸಿದ ಶ್ರೀಯುತ ರಾಹುಲ್ ಕರಾಡ್ ಜೀರವರನ್ನು ಅವರ ಸಾಮಾಜಿಕ ಜವಾಬ್ದಾರಿಯನ್ನು ಅತ್ಯಂತ ಗೌರವದಿಂದ ಶ್ಲಾಘಿಸುತ್ತಾ, ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಶ್ರೀ ರಾಹುಲ್ ಕರಾಡ್ ಜೀ ರವರನ್ನು

ಹಾಗೂ ನೆರವು ನೀಡಿದ ಎಮ್ ಐ ಟಿ ಸ್ಕೂಲ್ ಆಫ್ ಗೌರ್ನಮೆಂಟ್‌ನ ತಂಡವನ್ನು ಈ ಸದನವು ಅಭಿನಂದಿಸುತ್ತದೆ.

### 3. ನಿಯಮ 330ಎ ರ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು

1. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಅರೆಕಾಲಿಕ ಉಪನ್ಯಾಸಕರುಗಳಿಗೆ 4 ತಿಂಗಳಿನಿಂದ ಬಾಕಿ ಇರುವ ವೇತನ ಬಿಡುಗಡೆ ಆಗದಿರುವ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಮಂಜುನಾಥ್ ಭಂಡಾರಿ** ಅವರು ಪಡಿತರ ಚೀಟಿ ಅರ್ಜಿ ಸಲ್ಲಿಕೆ ಅವಕಾಶ ಕಲ್ಪಿಸದೇ ಇರುವುದರಿಂದ ಆಗಿರುವ ತೊಂದರೆ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

### 4. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಡಿ.ಎಸ್. ಅರುಣ್** ಅವರು ಏಕ ಬಳಕೆ ಪ್ಲಾಸ್ಟಿಕ್ ಉತ್ಪಾದನೆಯನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ದಿನಾಂಕ: 06.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

2. **ಶ್ರೀ ಶಶೀಲ್ ಜಿ. ನಮೋಶಿ** ಅವರು ಶ್ರೀ ನಾರಾಯಣ ಗುರು ವಸತಿ ಶಾಲೆಗಳಿಗೆ ತ್ವರಿತವಾಗಿ ಶಾಶ್ವತ ಕಟ್ಟಡ ಹಾಗೂ ಸಿಬ್ಬಂದಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ

ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

3. **ಶ್ರೀ ಹೆಚ್.ಎಸ್. ಗೋಪಿನಾಥ್** ಅವರು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಆರ್.ಟಿ.ಓ ಕಛೇರಿಗಳಲ್ಲಿ ಅಕ್ರಮವಾಗಿ ವಾಹನ ನೋಂದಣಿ ಮಾಡುತ್ತಿರುವ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

4. **ಶ್ರೀ ಎಂ. ನಾಗರಾಜು** ಅವರು ಮಾಲೂರು ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಚಿಕಿತ್ಸೆ ವ್ಯವಸ್ಥೆಯಲ್ಲಿನ ಸಮಸ್ಯೆ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

### 5. ನಿಯಮ 330ಎ ರ ಅಡಿ ವಿಶೇಷ ಪ್ರಸ್ತಾವಗಳಿಗೆ ಉತ್ತರ

1. **ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಶೈಕ್ಷಣಿಕ ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಜನಸೇವಾ ಟ್ರಸ್ಟ್‌ಗೆ ಜಮೀನು ಹಂಚಿಕೆ ಮಾಡಿರುವ ಆದೇಶವನ್ನು ತಡೆಹಿಡಿದಿರುವ ಕುರಿತು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರವನ್ನು ಮಂಡಿಸಿದರು.

2. **ಶ್ರೀ ಕೆ.ಎ. ತಿಪ್ಪೇಸ್ವಾಮಿ** ಅವರು ಕಂದಾಯ ಇಲಾಖೆಯ ದಿನಾಂಕ:03.05.2010ರಲ್ಲಿ ಹೊರಡಿಸಿರುವ ಸುತ್ತೋಲೆ ಆದೇಶದನ್ವಯ ಗೋಮಾಳ ಹೊರತುಪಡಿಸಿ, ವಿಶೇಷ ಹಕ್ಕುಳ್ಳ ಪ್ರದೇಶ ಜಮೀನಿಗೆ ನಿರ್ಬಂಧ ಹೇರಿರುವ ಕುರಿತು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರವನ್ನು ಮಂಡಿಸಿದರು.

**6. ಶಾಸನ ರಚನೆ**

1. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ"ದ ಕುರಿತು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಗೃಹ ಸಚಿವರು ವಿವರಣೆಯನ್ನು ನೀಡಿದರು.

   ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

   ಶ್ರೀಯುತರುಗಳಾದ:

   1. ಕೆ.ಎ. ತಿಪ್ಪೇಸ್ವಾಮಿ
   2. ಕೇಶವ ಪ್ರಸಾದ್ ಎಸ್
   3. ಡಿ.ಎಸ್. ಅರುಣ್
   4. ಡಾ: ತೇಜಸ್ವಿನಿಗೌಡ
   5. ಮರಿತಿಬ್ಬೇಗೌಡ
   6. ಎಸ್.ವ್ಹಿ. ಸಂಕನೂರ
   7. ಅರವಿಂದ ಕುಮಾರ್ ಅರಳಿ
   8. ಎಸ್. ರುದ್ರೇಗೌಡ
   9. ಛಲವಾದಿ ಟಿ. ನಾರಾಯಣಸ್ವಾಮಿ

   ಮಾನ್ಯ ಗೃಹ ಸಚಿವರು ಉತ್ತರಿಸಿದರು.

   ಧ್ವನಿಮತದ ಮೂಲಕ ವಿಧೇಯಕವನ್ನು ಅಂಗೀಕರಿಸಲಾಯಿತು.

2. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಡಾ: ತೇಜಸ್ವಿನಿಗೌಡ
2. ಕೆ.ಎ. ತಿಪ್ಪೇಸ್ವಾಮಿ
3. ಮರಿತಿಬ್ಬೇಗೌಡ
4. ಛಲವಾದಿ ಟಿ. ನಾರಾಯಣಸ್ವಾಮಿ
5. ಡಾ: ವೈ.ಎ. ನಾರಾಯಣಸ್ವಾಮಿ
6. ಎಂ. ನಾಗರಾಜು
7. ಎನ್. ರವಿಕುಮಾರ್
8. ಶರವಣ ಟಿ.ಎ.

ಮಾನ್ಯ ಸಾರಿಗೆ ಸಚಿವರು ಉತ್ತರಿಸಿದರು.

ಧ್ವನಿಮತದ ಮೂಲಕ ವಿಧೇಯಕವನ್ನು ಅಂಗೀಕರಿಸಲಾಯಿತು.

ಬೆಳಗ್ಗೆ 11.40 ಗಂಟೆಗೆ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

## 7. 2023–24ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯನ್ನು ಪ್ರಾರಂಭಿಸಿದರು.

1. ಶ್ರೀ ಅಡಗೂರ್ ಹೆಚ್. ವಿಶ್ವನಾಥ್
2. ಶ್ರೀ ಎಂ. ನಾಗರಾಜು
3. ಶ್ರೀ ಕೆ.ಎ. ತಿಪ್ಪೇಸ್ವಾಮಿ
4. ಶ್ರೀ ಎಸ್. ರುದ್ರೇಗೌಡ

ಮಧ್ಯಾಹ್ನ 1.50 ಗಂಟೆಯಲ್ಲಿ ಸದನವನ್ನು ಮುಂದೂಡಿ ಮಧ್ಯಾಹ್ನ 3.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು ಪ್ರಕಟಿಸಿದರು.

ಮಧ್ಯಾಹ್ನ 3.30 ಗಂಟೆಗೆ ಸದನವು ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಮಧ್ಯಾಹ್ನ 3.32ರಲ್ಲಿ ಸದನವನ್ನು 5 ನಿಮಿಷಗಳ ಕಾಲ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಮಧ್ಯಾಹ್ನ 3.50 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸದನವು ಸಭೆ ಸೇರಿತು.

## 8. ಪ್ರಕಟಣೆ

1. ಕಳೆದ ಅಧಿವೇಶನಗಳಲ್ಲಿ ಹಲವಾರು ಬಾರಿ ಮೊಬೈಲ್‌ಗಳನ್ನು ಸದನದ ಒಳಗೆ ವೀಕ್ಷಿಸಬಾರದೆಂದು, ಕಾರ್ಯಕಲಾಪಗಳು ಪ್ರಾರಂಭವಾಗುವ ಮೊದಲು ಮೊಬೈಲ್ ಸ್ವಿಚ್ ಆಫ್ ಮಾಡಬೇಕೆಂದು ಹಾಗೂ ವಿಧಾನ ಪರಿಷತ್ತಿನ ಸಭಾಂಗಣದ ಮೊಗಸಾಲೆಗಳಲ್ಲಿ ಇಡಲಾಗಿರುವ ಕಪಾಟುಗಳಲ್ಲಿ (ಪಿಜನ್ ಬಾಕ್ಸ್) ಮಾನ್ಯ ಶಾಸಕರುಗಳ ಮೊಬೈಲ್‌ಗಳನ್ನು ಸಂರಕ್ಷಿಸಲು ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಸದನಕ್ಕೆ ಆಗಮಿಸುವ ಪೂರ್ವದಲ್ಲಿ ಮಾನ್ಯ ಶಾಸಕರುಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಾನ್ಯ ಶಾಸಕರುಗಳಿಗೆ/ ಸರ್ಕಾರಿ ಅಧಿಕಾರಿಗಳಿಗೆ ತಿಳಿಸಲಾಗಿದ್ದರೂ ಸಹ ಪಾಲಿಸುತ್ತಿಲ್ಲದಿರುವುದನ್ನು ಗಮನಿಸಲಾಗಿದೆ.

   ಇನ್ನು ಮುಂದೆ ಮೊಬೈಲ್‌ಗಳನ್ನು ಕಡ್ಡಾಯವಾಗಿ ಸದನಕ್ಕೆ ತರಬಾರದೆಂದು ಈ ಮೂಲಕ ಮಾನ್ಯ ಶಾಸಕರುಗಳ/ಸರ್ಕಾರಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

## 2023–2024ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ

5. ಶ್ರೀ ಯು.ಬಿ. ವೆಂಕಟೇಶ್

ಸಂಜೆ 4.35 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

**ಪ್ರಕಟಣೆ**

2. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:19.07.2023**ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

| | |
|---|---|
| **1.** | ಸಿವಿಲ್ ಪ್ರಕ್ರಿಯಾ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023 |
| **2.** | ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ವಿಧೇಯಕ, 2023 |
| **3.** | ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2023 |
| **4.** | ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023 |
| **5.** | ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2023 |

**2023–2024ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ**

6. ಶ್ರೀ ಗೋವಿಂದರಾಜು

**"ಗದ್ದಲ"**

ವಿರೋಧ ಪಕ್ಷದ (ಇಂಡಿಯಾ) ನಾಯಕರುಗಳ ಸಭೆಗೆ ಐ.ಎ.ಎಸ್. ಅಧಿಕಾರಿಗಳನ್ನು ನಿಯೋಜಿಸಿರುವ ಕುರಿತು ವಿರೋಧ ಪಕ್ಷದ ಮಾನ್ಯ ಶಾಸಕರುಗಳು (ಭಾರತೀಯ ಜನತಾ ಪಕ್ಷ) ಬಾವಿಗೆ ಬಂದು ಧರಣಿ ನಿರತರಾದರು.

ಸಂಜೆ 5.10 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) 10 ನಿಮಿಷಗಳ ಕಾಲ ಮುಂದೂಡಿರುವುದಾಗಿ ಪ್ರಕಟಿಸಿದರು.

ಸಂಜೆ 5.28 ಗಂಟೆಗೆ ಮಾನ್ಯ ಉಪ ಸಭಾಪತಿಯವರ (ಶ್ರೀ ಎಂ.ಕೆ. ಪ್ರಾಣೇಶ್) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ (ಭಾರತೀಯ ಜನತಾ ಪಕ್ಷ) ಮಾನ್ಯ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ಮುಂದುವರೆಸಿದರು.

ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಮಾನ್ಯ ಶಾಸಕರುಗಳ ನಡುವೆ ವಾಗ್ವಾದ

"ಗದ್ದಲ"

ಸಂಜೆ 5.40 ಗಂಟೆಯಲ್ಲಿ ಸದನವನ್ನು 10 ನಿಮಿಷ ಮುಂದೂಡಿರುವುದಾಗಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಪ್ರಕಟಿಸಿದರು.

ಸಂಜೆ 6.00 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ (ಭಾರತೀಯ ಜನತಾ ಪಕ್ಷ) ಮಾನ್ಯ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ಮುಂದುವರೆಸಿದರು.

"ಗದ್ದಲ"

ಸಂಜೆ 6.05 ಗಂಟೆಯಲ್ಲಿ ಸದನವನ್ನು ಮುಂದೂಡಿ ದಿನಾಂಕ: 20.07.2023ರಂದು ಬೆಳಿಗ್ಗೆ: 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**
**ಕಾರ್ಯದರ್ಶಿ.**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಗುರುವಾರ, ದಿನಾಂಕ:20.07.2023**

**(14)**

ಸದನವು ಬೆಳಗ್ಗೆ: 10.30 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಸದನವನ್ನು ಬೆಳಗ್ಗೆ 10.30 ಗಂಟೆಗೆ ಕೋರಂ ಇಲ್ಲದ ಕಾರಣ 10 ನಿಮಿಷಗಳ ಕಾಲ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು (ಶ್ರಿ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

ಸದನವು 11.45 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಹಾಜರಿಲ್ಲದಿರುವ ಬಗ್ಗೆ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಪ್ರಸ್ತಾಪಿಸಿದರು.

ಮಾನ್ಯ ಸಭಾಪತಿಯವರು ವಿರೋಧ ಪಕ್ಷದ ಹಿರಿಯ ಸದಸ್ಯರುಗಳ ಜೊತೆ ಮಾತನಾಡಿ ಉಪವೇಶನದಲ್ಲಿ ಹಾಜರಿರಲು ತಿಳಿಸಿದ್ದರು ಸಹ ವಿರೋಧ ಪಕ್ಷದವರು ಹಾಜರಾಗಿಲ್ಲವೆಂದು ಸದನದ ಗಮನಕ್ಕೆ ತಂದರು.

**1. ತಡೆಹಿಡಿಯಲಾದ ಪ್ರಶ್ನೆ**

**ದಿನಾಂಕ:12.07.2023ರ ಸಮೂಹ–IIIರ 7ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಶಶೀಲ್ ಜಿ. ನಮೋಶಿ ಅವರ ಚುಕ್ಕೆ ಗುರುತಿನ ಪ್ರಶ್ನೆ**

1. 100 (679)

ಸೂಚನೆಯನ್ನು ನೀಡಿದ್ದ ಸದಸ್ಯರು ಗೈರು ಹಾಜರಾಗಿದ್ದ ಕಾರಣ ಸೂಚನೆಯನ್ನು ತೆಗೆದುಕೊಂಡಿರುವುದಿಲ್ಲ.

## 2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಕಾರ್ಯದರ್ಶಿಯವರು ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು

01. ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023

02. ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ವಿಧೇಯಕ, 2023

03. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2023

04. ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023

05. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2023

## 3. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಸೂಚಿಸಿ ವಿಧೇಯಕದ ಕುರಿತು ವಿವರಣೆ ನೀಡಿದರು.

   ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

   ಶ್ರೀಯುತರುಗಳಾದ:

   1. ಅಡಗೂರ್ ಹೆಚ್. ವಿಶ್ವನಾಥ್
   2. ಮರಿತಿಬ್ಬೇಗೌಡ
   3. ಯು.ಬಿ. ವೆಂಕಟೇಶ್

4. ನಸೀರ್ ಅಹ್ಮದ್

5. ಜಗದೀಶ್ ಶೆಟ್ಟರ

6. ಪ್ರಕಾಶ್ ಬಾಬಣ್ಣ ಹುಕ್ಕೇರಿ

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು.

ಧ್ವನಿ ಮತದ ಮೂಲಕ ವಿಧೇಯಕವನ್ನು ಅಂಗೀಕರಿಸಲಾಯಿತು.

2. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ವಿಧೇಯಕದ ಕುರಿತು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಮರಿತಿಬ್ಬೇಗೌಡ

2. ಜಗದೀಶ್ ಶೆಟ್ಟರ

3. ಅಡಗೂರ್ ಹೆಚ್. ವಿಶ್ವನಾಥ್

4. ಯು.ಬಿ. ವೆಂಕಟೇಶ್

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

3. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ"ವನ್ನು

ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

4. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ **"**ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ**"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಜಗದೀಶ್ ಶೆಟ್ಟರ್
2. ಮರಿತಿಬ್ಬೇಗೌಡ
3. ಸಲೀಂ ಅಹಮದ್
4. ನಸೀರ್ ಅಹ್ಮದ್
5. ಅಡಗೂರ್ ಹೆಚ್. ವಿಶ್ವನಾಥ್

ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

### 4. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರಗಳು

1. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಭಾವಿ ಶಿಕ್ಷಕರು ನಡೆಸುತ್ತಿರುವ ಧರಣಿ ಕುರಿತಂತೆ ಕೂಡಲೇ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ವಿತರಿಸುವ ಬಗ್ಗೆ ದಿನಾಂಕ:05.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

2. **ಶ್ರೀ ಮರಿತಿಬ್ಬೇಗೌಡ** ಅವರು ನ್ಯಾಯಾಲಯದ ತೀರ್ಪಿನಂತೆ ಶಾಲೆಗಳ ಮಾನ್ಯತೆ ನವೀಕರಣ ಮಾರ್ಗಸೂಚಿಗಳನ್ನು ಮಾರ್ಪಡಿಸುವ ಹಾಗೂ

ಮಾನ್ಯತೆ ನವೀಕರಿಸುವ ಅವಧಿಯನ್ನು ಹೆಚ್ಚಿಸುವ ಬಗ್ಗೆ ದಿನಾಂಕ:11.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

3. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೃಷಿ ಡಿಪ್ಲೋಮೋ ಕೋರ್ಸ್ ಪ್ರಾರಂಭಿಸಿ, ಸದರಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲು ಅನುದಾನ ಮಂಜೂರು ಮಾಡುವ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

4. **ಶ್ರೀ ಶಶೀಲ್ ಜಿ. ನಮೋಶಿ** ಅವರು ಶ್ರೀ ನಾರಾಯಣ ಗುರು ವಸತಿ ಶಾಲೆಗಳಿಗೆ ತ್ವರಿತವಾಗಿ ಶಾಶ್ವತ ಕಟ್ಟಡ ಹಾಗೂ ಸಿಬ್ಬಂದಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ದಿನಾಂಕ:12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

5. **ಶ್ರೀ ಪ್ರಕಾಶ್ ಕೆ. ರಾಥೋಡ್** ಅವರು ಜುಲೈ 13ನ್ನು **"**ವಿಧಾನಸೌಧದ ಸಂಸ್ಥಾಪನಾ ದಿನ**"** ವೆಂದು ಘೋಷಿಸುವ ಬಗ್ಗೆ ದಿನಾಂಕ: 12.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

6. **ಶ್ರೀ ಶಶೀಲ್ ಜಿ. ನಮೋಶಿ** ಅವರು ವಿವಿಧ ಇಲಾಖೆಯಲ್ಲಿ ಖಾಲಿ ಇರುವ 500ಕ್ಕೂ ಹೆಚ್ಚು ಗೆಜೆಟೆಡ್ ಪ್ರೋಬೆಷನರಿ ಹುದ್ದೆಗೆ ನೇಮಕಾತಿ ಅಧಿಸೂಚನೆ ಹೊರಡಿಸುವ ಬಗ್ಗೆ ದಿನಾಂಕ:13.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ

ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

7. **ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಸರ್ಕಾರದ ಶಕ್ತಿ ಯೋಜನೆಯಿಂದ ನಷ್ಟಕ್ಕೆ ಒಳಗಾಗಿರುವ ಆಟೋರಿಕ್ಷಾ ಚಾಲಕರಿಗೆ ಪರಿಹಾರ ನೀಡುವ ಬಗ್ಗೆ ದಿನಾಂಕ:13.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

### 5. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳ ಉತ್ತರಗಳು

1. **ಶ್ರೀ ಮರಿತಿಬ್ಬೇಗೌಡ** ಅವರು ಮಾರ್ಚ್ 2023ರಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆ, ಮೌಲ್ಯ ಮಾಪನ ಕಾರ್ಯಗಳ ಭಗವಹಿಸಿರುವ ಬೋಧಕ ಹಾಗೂ ಸಿಬ್ಬಂದಿ ವರ್ಗದವರ ಸಂಭಾವನೆ ಹಾಗೂ ಇತರೆ ಭತ್ಯೆಗಳ ಬಿಡುಗಡೆ ಕುರಿತು ದಿನಾಂಕ:17.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

2. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಅರೆಕಾಲಿಕ ಉಪನ್ಯಾಸಕರುಗಳಿಗೆ 4 ತಿಂಗಳಿನಿಂದ ಬಾಕಿ ಇರುವ ವೇತನ ಬಿಡುಗಡೆ ಆಗದಿರುವ ಕುರಿತು ದಿನಾಂಕ:19.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

3. **ಶ್ರೀ ಮಂಜುನಾಥ್ ಭಂಡಾರಿ** ಅವರು ಪಡಿತರ ಚೀಟಿ ಅರ್ಜಿ ಸಲ್ಲಿಕೆ ಅವಕಾಶ ಕಲ್ಪಿಸದೇ ಇರುವುದರಿಂದ ಆಗಿರುವ ತೊಂದರೆ ಕುರಿತು ದಿನಾಂಕ:19.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

**ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

5. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಹಕಾರ ಸಚಿವರು ವಿಧೇಯಕದ ಕುರಿತು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಮಧ್ಯಾಹ್ನ 2.10 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪ್ರಕಟಿಸಿದರು.

ಮಧ್ಯಾಹ್ನ 4.10 ಗಂಟೆಗೆ ಮಾನ್ಯ ಸಭಾಪತಿಯವರ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**6. ವಿತ್ತೀಯ ಕಾರ್ಯಕಲಾಪ**

2023-2024ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

7. ಶ್ರೀ ಅರವಿಂದ ಕುಮಾರ್ ಅರಳಿ
8. ಶ್ರೀ ಕೆ. ಹರೀಶ್ ಕುಮಾರ್
9. ಶ್ರೀ ಎಸ್. ರವಿ
10. ಶ್ರೀ ನಸೀರ್ ಅಹ್ಮದ್

ಸಂಜೆ 5.15 ಗಂಟೆಗೆ ಮಾನ್ಯ ಸಭಾಪತಿಯವರ ಪೀಠದಲ್ಲಿ ಶ್ರೀ ಮರಿತಿಬ್ಬೇಗೌಡ ಅವರು ಆಸೀನರಾದರು.

11. ಶ್ರೀ ಮಧು ಜಿ. ಮಾದೇಗೌಡ
12. ಶ್ರೀ ಸಲೀಂ ಅಹಮದ್

13. ಶ್ರೀ ಕೆ. ಅಬ್ದುಲ್ ಜಬ್ಬರ್

14. ಶ್ರೀ ಎಂ.ಎಲ್. ಅನಿಲ್ ಕುಮಾರ್

ಸಂಜೆ 6.15 ಗಂಟೆಗೆ ಮಾನ್ಯ ಸಭಾಪತಿಯವರು (ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಪೀಠದಲ್ಲಿ ಆಸೀನರಾದರು.

15. ಶ್ರೀ ಮರಿತಿಬ್ಬೇಗೌಡ

**ಪ್ರಕಟಣೆ**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:20.07.2023**ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

| | |
|---|---|
| 1. | ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2023 |
| 2. | ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ, 2023 |

ಸಂಜೆ 7.40 ಗಂಟೆಗೆ ಮಾನ್ಯ ಸಭಾಪತಿಯವರು ಸದನವನ್ನು ಮುಂದೂಡಿ ದಿನಾಂಕ: 21.07.2023ರಂದು ಬೆಳಿಗ್ಗೆ: 10.00 ಗಂಟೆಗೆ ಸಭೆ ಸೇರುವುದಾಗಿ ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**

**ಕಾರ್ಯದರ್ಶಿ.**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತನೆಯ ಅಧಿವೇಶನ

ಲಘು ಪ್ರಕಟಣೆ ಭಾಗ–1

**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**

**ಶುಕ್ರವಾರ, ದಿನಾಂಕ:21.07.2023**

(15)

ಸದನವು ಬೆಳಗ್ಗೆ: 10.27 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ವರದಿಯನ್ನೊಪ್ಪಿಸುವುದು

**ಶ್ರೀ ಎಂ.ಕೆ. ಪ್ರಾಣೇಶ್**(ಅಧ್ಯಕ್ಷರು, ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ) **ಮಾನ್ಯ ಉಪ ಸಭಾಪತಿಯವರ ಪರವಾಗಿ ಶ್ರೀ ಯು.ಬಿ. ವೆಂಕಟೇಶ್, ಸದಸ್ಯರು** 2023ನೇ ಸಾಲಿನ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಒಪ್ಪಿಸಿದರು.

## 2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಕಾರ್ಯದರ್ಶಿಯವರು ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಮಂಡಿಸಿದರು.

1. ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ, 2023
2. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2023
3. ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) (ತಿದ್ದುಪಡಿ) ವಿಧೇಯಕ, 2023

## 3. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ವಿಧೇಯಕದ ಕುರಿತು ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

ಶ್ರೀಯುತರುಗಳಾದ:

1. ಮರಿತಿಬ್ಬೇಗೌಡ
2. ಡಾ: ಡಿ. ತಿಮ್ಮಯ್ಯ
3. ನಾಗರಾಜು ಎಂ.

ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ನೀಡಿದರು.

ಧ್ವನಿಮತದ ಮೂಲಕ ವಿಧೇಯಕವನ್ನು ಅಂಗೀಕರಿಸಲಾಯಿತು.

## 4. ಪ್ರಶ್ನೋತ್ತರ

ದಿನಾಂಕ:07.07.2023ರಂದು ರದ್ದುಪಡಿಸಲಾದ ಪ್ರಶ್ನೋತ್ತರ ಅವಧಿಯ ತಡೆಹಿಡಿಯಲಾದ ಪ್ರಶ್ನೆಗಳ ಪಟ್ಟಿ–4, ಸಮೂಹ–IVರ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 46 (318)
2. 47 (351) ಶ್ರೀ ಶಶೀಲ್ ಜಿ. ನಮೋಶಿ ಪರವಾಗಿ ಶ್ರೀ ಮರಿತಿಬ್ಬೇಗೌಡ
3. 48 (335)
4. 49 (317)

5. 50 (384)
6. 51 (316)
7. 52 (319)
8. 53 (314)
9. 54 (298)
10. 55 (321)
11. 56 (310)
12. 57 (312)
13. 58 (361)
14. 59 (381)
15. 60 (359)

ದಿನಾಂಕ:07.07.2023ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Vರ 4ನೇ ಪಟ್ಟಿಯ ಒಟ್ಟು 79 ಪ್ರಶ್ನೆಗಳಿಗೆ ಹಾಗೂ ದಿನಾಂಕ:12.07.2023ರಂದು ಸಮೂಹ–IIIರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 96 (754)ಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಮಂಡಿಸಿದರು.

### 5. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು

1. **ಶ್ರೀ ಮರಿತಿಬ್ಬೇಗೌಡ** ಅವರು ಅತಿಥಿ ಶಿಕ್ಷಕರಿಗೆ ಸೇವಾ ಭದ್ರತೆ, ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ನಿಗಧಿತ ಸಮಯಕ್ಕೆ ವೇತನ ನೀಡುವ ಕುರಿತು ಪ್ರಸ್ತಾಪಿಸಿದರು.

   ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 6. ವಿತ್ತೀಯ ಕಾರ್ಯಕಲಾಪ

## 2023–24ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ

ಮಾನ್ಯ ಮುಖ್ಯಮಂತ್ರಿಗಳು 2023–24ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆಗೆ ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಮರಿತಿಬ್ಬೇಗೌಡ
2. ಶ್ರೀ ತಿಪ್ಪಣ್ಣಪ್ಪ
3. ಶ್ರೀ ಅಡಗೂರ್ ಹೆಚ್. ವಿಶ್ವನಾಥ್

## 7. ನಿಯಮ 330ಎ ರ ಅಡಿ ವಿಶೇಷ ಪ್ರಸ್ತಾವಗಳಿಗೆ ಉತ್ತರ

1. **ಶ್ರೀ ಸಿ.ಎನ್. ಮಂಜೇಗೌಡ** ಅವರು ಮೈಸೂರು ನಗರದ ಪಾರಂಪರಿಕ ಕಟ್ಟಡಗಳ ರಕ್ಷಣೆಗಾಗಿ ಅನುದಾನ ಬಿಡುಗಡೆ ನೀಡುವ ಕುರಿತು ದಿನಾಂಕ:18.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರವನ್ನು ಮಂಡಿಸಿದರು.

2. **ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಯಲ್ಲಾಪುರ ಗ್ರಾಮದಲ್ಲಿ ನಡೆಸುತ್ತಿರುವ ಬುಡಕಟ್ಟು ಜನಾಂಗದ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕಾಗಿ ನೀಡಿರುವ ಮಂಜೂರು ಆದೇಶಕ್ಕೆ ತಡೆ ನೀಡಿರುವ ಕುರಿತು ದಿನಾಂಕ:18.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರವನ್ನು ಮಂಡಿಸಿದರು.

## 8. ಶೂನ್ಯವೇಳೆಯ ಪ್ರಸ್ತಾವನೆಗೆ ಉತ್ತರ

1. **ಶ್ರೀ ಗೋವಿಂದರಾಜು** ಅವರು ವಿಶೇಷ ಚೇತನರ ಶಾಲೆಗೆ ಅಗತ್ಯ ಸಿಬ್ಬಂದಿ, ಶಿಕ್ಷಕರನ್ನು ಒದಗಿಸುವ ಕುರಿತು ದಿನಾಂಕ: 13.07.2023ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

### ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

2. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ವಿಧೇಯಕದ ಕುರಿತು ಮಾನ್ಯ ಮುಖ್ಯಮಂತ್ರಿಯವರು ವಿವರಣೆ ನೀಡಿದರು.

   ಧ್ವನಿಮತದ ಮೂಲಕ ವಿಧೇಯಕವನ್ನು ಅಂಗೀಕರಿಸಲಾಯಿತು.

3. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2023ನೇ ಸಾಲಿನ "ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ವಿಧೇಯಕದ ಕುರಿತು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ವಿವರಣೆ ನೀಡಿದರು.

   ಧ್ವನಿಮತದ ಮೂಲಕ ವಿಧೇಯಕವನ್ನು ಅಂಗೀಕರಿಸಲಾಯಿತು.

### ಸಾರಾಂಶ

ವಿಧಾನ ಪರಿಷತ್ತಿನ 150ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:03.07.2023ರಿಂದ 21.07.2023 ರವರೆಗೆ ಒಟ್ಟು 15 ದಿನಗಳು ಅಂದರೆ, 70.16 ಗಂಟೆಗಳು ನಡೆಸಲಾಗಿರುತ್ತದೆ.

ದಿನಾಂಕ:03.07.2023ರಂದು ಮಧ್ಯಾಹ್ನ:12.00 ಗಂಟೆಗೆ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ನಂತರ ಮಧ್ಯಾಹ್ನ:1.00 ಗಂಟೆಗೆ ಸದನವು ಪ್ರಾರಂಭಗೊಂಡಿತು.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ 13 ಗಂಟೆ 33 ನಿಮಿಷಗಳು ಚರ್ಚೆ ನಡೆಸಿ ದಿನಾಂಕ:14.07.2023 ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 10 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಎಂ.ಐ.ಟಿ ಸ್ಕೂಲ್ ಆಫ್ ಗೌರ್ನಮೆಂಟ್, ಪುಣೆ ಇವರ ವತಿಯಿಂದ ರಾಷ್ಟ್ರಮಟ್ಟದ ನ್ಯಾಷನಲ್ ಲೆಜಿಸ್‌ಲೇಟರ್ಸ್ ಕಾನ್ಫರೆನ್ಸ್–2023ನ್ನು ದಿನಾಂಕ:15.06.2023ರಿಂದ 17.06.2023ರವರೆಗೆ ಮುಂಬೈನ ಜಿಯೋ ವರ್ಲ್ಡ್ ಸೆಂಟರ್‌ನಲ್ಲಿ ಸಮರ್ಥ ಭಾರತವನ್ನು ನಿರ್ಮಾಣ ಮಾಡುವ ದಿಶೆಯಲ್ಲಿ ಆಯೋಜಿಸಿದ್ದ ಸಮ್ಮೇಳನದ ರುವಾರಿಯಾಗಿದ್ದ ಶ್ರೀ ರಾಹುಲ್ ಕರಾಡೆಜೀ ಹಾಗೂ ಅವರ ತಂಡಕ್ಕೆ ಸದನವು ಅಭಿನಂದನಾ ನಿರ್ಣಯವನ್ನು ಮಂಡಿಸಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ದಿನಾಂಕ:07.07.2023ರಂದು ಮಾನ್ಯ ಮುಖ್ಯಮಂತ್ರಿಯವರು 2023–24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು. ಆಯವ್ಯಯ ಅಂದಾಜುಗಳ ಮೇಲೆ ಸುಮಾರು 06 ಗಂಟೆ 0.40 ನಿಮಿಷಗಳ

ಕಾಲ ಚರ್ಚೆ ನಡೆಸಿ, ದಿನಾಂಕ: 21.07.2023ರಂದು ಸರ್ಕಾರದಿಂದ ಉತ್ತರಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01, 02, 03 ಹಾಗೂ 04ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಯನ್ನು (2023ನೇ ವರ್ಷದ ವರದಿ ಸಂಖ್ಯೆ:2) ಸಭೆಯ ಮುಂದಿಡಲಾಯಿತು.

ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 100ನೇ ವರದಿ, ಭರವಸೆಗಳ ಸಮಿತಿಯ 49ನೇ ವರದಿ, 2023ನೇ ಸಾಲಿನ ಸದಸ್ಯರುಗಳ ಖಾಸಗಿ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಯ ಮೊದಲನೇ ವರದಿ, 15ನೇ ವಿಧಾನ ಸಭೆಯ 2020–21ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹನ್ನೆರಡನೇ ವಿಶೇಷ ವರದಿಗಳನ್ನು ಸದನದಲ್ಲಿ ಮಂಡಿಸಲಾಯಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣದಲ್ಲಿ ಅವ್ಯವಹಾರ ಮಾಡಿರುವುದನ್ನು ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ವರದಿಯನ್ನು ಒಪ್ಪಿಸಲಾಯಿತು.

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:22.04.2023 ರಿಂದ 06 ತಿಂಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಿರುವ

ಹಾಗೂ ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:21.03.2023 ರಿಂದ 06 ತಿಂಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವಗಳನ್ನು ಸದನದಲ್ಲಿ ಮಂಡಿಸಿ, ಸದನದ ಸಹಮತಿಯನ್ನು ಪಡೆಯಲಾಯಿತು.

ವಿಧಾನ ಮಂಡಲದ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸೆನೆಟ್‌ಗೆ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಚುನಾವಣೆ ನಡೆಸುವ ಬದಲು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ನಿಯಮ 59 ರಡಿಯಲ್ಲಿ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 02 ಸೂಚನೆಗಳು ತಿರಸ್ಕೃತಗೊಂಡಿದ್ದು, 03 ಸೂಚನೆಗಳು ನಿಯಮ 68ಕ್ಕೆ ಪರಿವರ್ತನೆಯಾಗಿರುವ ಪೈಕಿ 01 ಸೂಚನೆಗೆ ಸದನದಲ್ಲಿ ಉತ್ತರಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 939 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 104 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 29 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 804 ಪ್ರಶ್ನೆಗಳ ಪೈಕಿ 521 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ. ಯಾವುದೇ ಸೂಚನೆಗಳನ್ನು ಚರ್ಚಿಸಿರುವುದಿಲ್ಲ.

ನಿಯಮ 72ರಡಿಯಲ್ಲಿ 159 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 19 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು.

ನಿಯಮ 330ರಡಿಯಲ್ಲಿ 85 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 10 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 56 ಸೂಚನೆಗಳ ಪೈಕಿ 46 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ನಿಯಮ 330ಎರ ವಿಶೇಷ ಪ್ರಸ್ತಾವಗಳಡಿಯಲ್ಲಿ ಸ್ವೀಕರಿಸಲಾಗಿರುವ ಒಟ್ಟು 12 ಸೂಚನೆಗಳ ಪೈಕಿ 07 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಒಟ್ಟು 13 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023ನ್ನು ಪರಿಶೀಲನಾ ಸಮಿತಿಗೆ ವಹಿಸಲಾಯಿತು.

**ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರು ಮಾತನಾಡಿದ ನಂತರ:–**

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು

ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ಮಧ್ಯಾಹ್ನ 2.35 ಗಂಟೆಯಲ್ಲಿ ರಾಷ್ಟ್ರಗೀತೆಯನ್ನು ನುಡಿಸುವುದರ ಮೂಲಕ ಮಾನ್ಯ ಸಭಾಪತಿಯವರು (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) **ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದರು.**

**ಕೆ.ಆರ್. ಮಹಾಲಕ್ಷ್ಮಿ,**
**ಕಾರ್ಯದರ್ಶಿ.**

****

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ.367/ಪಿ5